# ಕರ್ನಾಟಕ ಇತಿಹಾಸ ಮತ್ತು ಕನ್ನಡ ಸಾಹಿತ್ಯ: ಸಾಂಸ್ಕೃತಿಕ ದೃಷ್ಟಿಕೋನ

**ಕೆ.ಪಿ. ಈರಣ್ಣ**

ವಿಶ್ರಾಂತ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**DOI: https://doi.org/10.5281/zenodo.18007877**

## ABSTRACT:

ಇತಿಹಾಸ ಮತ್ತು ಕನ್ನಡ ಸಾಹಿತ್ಯದ ನಡುವಿನ ಆಳವಾದ ಸಂಬಂಧವನ್ನು ಸಾಂಸ್ಕೃತಿಕ ದೃಷ್ಟಿಯಿಂದ ವಿಶ್ಲೇಷಿಸುತ್ತದೆ. ಇತಿಹಾಸವು ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಬೆಳವಣಿಗೆಗಳನ್ನು ದಾಖಲಿಸುವುದಾದರೆ, ಸಾಹಿತ್ಯವು ಅವುಗಳ ಮಾನವೀಯ ಅನುಭವಗಳು, ಭಾವನೆಗಳು ಮತ್ತು ಮೌಲ್ಯಗಳನ್ನು ಅಭಿವ್ಯಕ್ತಗೊಳಿಸುತ್ತದೆ. ಕನ್ನಡ ಸಾಹಿತ್ಯವು ವಿಭಿನ್ನ ಯುಗಗಳಲ್ಲಿ (ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ) ಆಗಿನ ಸಂಸ್ಕೃತಿ, ಜನಜೀವನ, ನಂಬಿಕೆಗಳು ಮತ್ತು ಪರಂಪರೆಗಳನ್ನು ಪ್ರತಿಬಿಂಬಿಸಿದೆ. ಪಂಪ, ರನ್ನ, ಬಸವಣ್ಣ, ಹರಿಹರರಿಂದ ಮೊದಲ್ಗೊಂಡು ನವೋದಯ, ನವ್ಯ, ದಲಿತ ಸಾಹಿತ್ಯದವರೆಗೂ ಕನ್ನಡ ಸಾಹಿತ್ಯವು ಇತಿಹಾಸದ ಸಾಮಾಜಿಕ ಚಲನೆಗಳಿಗೆ ಸ್ಪಂದಿಸಿರುವುದು ಕಂಡುಬರುತ್ತದೆ. ವಚನ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಸಮಾನತೆ, ಸಹಕಾರ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದರೆ, ಆಧುನಿಕ ಸಾಹಿತ್ಯವು ವಸಾಹತುಶಾಹಿ ಅನುಭವ, ಸ್ವಾತಂತ್ರ್ಯ ಹೋರಾಟ, ಸಾಮಾಜಿಕ ಅಸಮಾನತೆಗಳ ಚಿತ್ರಣ ನೀಡುತ್ತದೆ.

## KEYWORDS:

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ದೃಷ್ಟಿಕೋನ, ಕೂಪಣ, ವನವಾಸಿಕ, ಇಸಿಲ, ಪರಂಪರೆ.

**ಪ್ರಸ್ತಾವನೆ:**

ಇತಿಹಾಸ ಮತ್ತು ಕನ್ನಡ ಸಾಹಿತ್ಯ ವಿಷಯದಲ್ಲಿ ಇತಿಹಾಸವಿದೆ, ಕನ್ನಡ ಸಾಹಿತ್ಯದ ಬೆಳವಣಿಗೆ ಇದೆ, ಜನಪದ ಸಾಹಿತ್ಯವಿದೆ, ಶರಣರ ಕುರಿತ ವಿಚಾರಗಳಿವೆ. ಕನ್ನಡ ಭಾಷೆ ಲಿಪಿಗಳ ಉಗಮ ವಿಕಾಸದ ಇತಿಹಾಸವಿದೆ, ಕನ್ನಡ ಕಾವ್ಯಗಳಲ್ಲಿಯ ಐತಿಹಾಸಿಕ ಅಂಶಗಳ ಕುರಿತ ವಿಚಾರಗಳಿವೆ. ಕರ್ನಾಟಕದ ಕವಿತ್ರಿಯರ ವಿಷಯವಿದ್ದರೆ, ಇವರನ್ನು ಪೋಷಿಸಿದ ರಾಣಿಯರು, ರಾಜರ ವಿದೇಶಿ ಸಂಬಂಧಗಳ ಕುರಿತು ಅಂಶಗಳಿವೆ. ನೃತ್ಯ ಕಲಾವಿದರಿದ್ದಾರೆ, ಜೈನ ಪರಂಪರೆ ಇದೆ. ಕಿತ್ತೂರು ಸಂಸ್ಥಾನದ ವಿಷಯವಿದೆ. ಕರ್ನಾಟಕದ ಕೋಟೆಗಳು, ಸ್ವಾತಂತ್ರ್ಯ ಹೋರಾಟಗಾರರ ಬದುಕು ಬರಹವಿದೆ. ಏಕೀಕರಣದ ವಿಚಾರಗಳಿವೆ. ಸ್ಮಾರಕಗಳ ವಿಚಾರಗಳೊಂದಿಗೆ ಇಂದಿನ ಆಧುನಿಕ ಯುಗದಲ್ಲಿ ತಂತ್ರಜ್ಞಾನದ ಸಹಾಯಗಳ ಮೂಲಕ ಹೇಗೆ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂಬ ವಿಷಯಗಳಿವೆ. ಸ್ವಾತಂತ್ರ್ಯ ಹೋರಾಟಗಾರರು ಬರೆದ ಅನುಭವಗಳನ್ನು ಹಂಚಿಕೊಳ್ಳುವುದರೊಂದಿಗೆ, ಸ್ಥಳೀಯ ಪ್ರಭುತ್ವಕ್ಕೆ ಸಂಬಂಧಿಸಿದ ಆಕರಗಳ ಶೋಧದ ಕೆಲಸವಿದೆ. ಹೀಗೆ ವಿವಿಧ ಶಿಸ್ತುಗಳಲ್ಲಿ ವಿಷಯದ ಅಧ್ಯಯನದ ವಿಶಾಲತೆಯನ್ನು ಗಮನಿಸಬಹುದಾಗಿದೆ.

**ಭಾಷೆ ಮತ್ತು ಲಿಪಿಯ ಬೆಳವಣಿಗೆ:** ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಬ್ರಾಹ್ಮಿ ಲಿಪಿ, ಪ್ರಾಕೃತ ಭಾಷೆ ಬಳಕೆಯಲ್ಲಿರುವುದೇ ಇದಕ್ಕೆ ಕಾರಣವಾಗಿರಬಹುದು. ಕರ್ನಾಟಕದಲ್ಲಿ ಅಶೋಕನ ಶಾಸನಗಳು ಸೇರಿ 18ಕ್ಕೂ ಹೆಚ್ಚು ಪ್ರಾಕೃತ ಶಾಸನಗಳು ಸಿಕ್ಕಿವೆ. ಆದರೆ ಕ್ರಿ.ಶ ದ

ಆರಂಭದ ವೇಳೆಗೆ ಪ್ರಾಕೃತ ಭಾಷೆಯ ಪ್ರಭಾವ ಕಡಿಮೆ ಆದಂತೆ ಕನ್ನಡ ಭಾಷೆಯ ಪದಗಳು ಕಂಡುಬಂದಿವೆ. ಅಶೋಕನ ಶಾಸನದಲ್ಲಿ ಇರುವ 'ಇಸಿಲ' ಪದವು ಕನ್ನಡ ಪದವೆಂದು ವಿದ್ವಾಂಸರ ಅಭಿಪ್ರಾಯವಾಗಿದ್ದರೂ ಅದು ಪ್ರಾಕೃತ ಎಂದು ನಿರ್ಧಾರಿತವಾಗಿದೆ. ಅದರಂತೆ ಸಿರಿ, ದೇಶ, ಕಾಲ, ಸಾಸನ, ತಪ ಇತ್ಯಾದಿ ಸಮ ಸಂಸ್ಕೃತ ಪದಗಳನ್ನು ಕಾಣಬಹುದು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಎರಡನೆಯ ಶತಮಾನದ ಶಾಸನಗಳಲ್ಲಿ ಬಳಕೆಯಾಗಿರುವ ಸಿರಿ, ಸಹಿಂದಕ, ಸಾಸನ, ತೇಗುಡ ಇತ್ಯಾದಿ ಪದಗಳು ಕನ್ನಡದ ತದ್ಭವ ರೂಪಗಳೆಂದು ಭಾಷಾ ವಿಜ್ಞಾನಿಗಳು ನಿರ್ಧರಿಸಿದ್ದಾರೆ. ಅಲ್ಲದೆ ಸನ್ನತ್ತಿ ಮತ್ತು ಕನಗನಹಳ್ಳಿಯಲ್ಲಿ ದೊರೆತಿರುವ 300ಕ್ಕೂ ಹೆಚ್ಚು ಶಾಸನಗಳಲ್ಲಿ ಉಲ್ಲೇಖವಾಗಿರುವ ಕೂಪಣ ಮತ್ತು ವನವಾಸಿಕ ಪದಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಎರಡನೆಯ ಶತಮಾನದ ನಂತರದ ಕಾಲಘಟ್ಟವು ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಕಾಲಘಟ್ಟವಾಗಿದೆ.

ಕನ್ನಡ ಭಾಷೆಯ ಅಧ್ಯಯನ ದೃಷ್ಟಿಯಿಂದ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡಗಳೆಂದು ವರ್ಗೀಕರಿಸಲಾಗುತ್ತಿದೆ. ಕವಿರಾಜಮಾರ್ಗಕಾರನವರೆಗೆ ಇರುವ ಕನ್ನಡ ಭಾಷೆಯ ಮಾದರಿಗಳು ಶಾಸನ ರೂಪದಲ್ಲಿ ಸಿಗುವುದು, ಉಳಿದೆಲ್ಲ ಅವಸ್ಥಾ ಭೇದಗಳನ್ನು ಅರಿಯಲು ಶಾಸನಗಳಷ್ಟೇ ಅಲ್ಲದೆ ಕಾವ್ಯಗಳು, ಗ್ರಂಥಗಳು ಹಾಗೂ ಕಡತಗಳು ನಮಗೆ ದೊರೆಯುತ್ತವೆ. ಒಂದು ಗಟ್ಟಿಯಾದ ಕನ್ನಡದ ಬಳಕೆಯನ್ನು ಬಾದಾಮಿ ಚಾಲುಕ್ಯ ಮಂಗಳೇಶನ ಬಾದಾಮಿಯ ಕ್ರಿ.ಶ 500ರ ಶಾಸನದಲ್ಲಿ ಕಾಣುತ್ತೇವೆ ಅದು ಇಂತಿದೆ. "ಸ್ವಸ್ತಿ ಶ್ರೀಮತ್ ಪ್ರಿಥಿವೀ ವಲ್ಲಭ ಮಂಗಲೀಶಾನಾ ಕಲ್ಮನೆಗೆ ಇತ್ತೊದಾನ ಲಂಜಿಗೇಸರ ದೇವರ್ಕೆ ಪೂನಿಱುವ ಮಾಲೆಕಾರರ್ಗೆ ಅರ್ಧ ವಿಸದಿ ಇತ್ತೊದಾನ ಜೆವೊನ್ ಪಂಚಮಹಾಪಾತರ್ಕಕುಂ ಏಳನೆಯ ನರಕದ ಪುಳ ಅಕ್ಕುಂ"

ಡಾ. ಶೆಟ್ಟರ್ ಅವರು ಹಲ್ಮಿಡಿಯ ಶಾಸನಕ್ಕಿಂತ ಪೂರ್ವದಲ್ಲಿಯೇ ಕನ್ನಡವು ಬಳಕೆಯಲ್ಲಿದ್ದು ಅದು ಗ್ರಂಥಸ್ತ ಭಾಷೆಯಾಗಿ ಹೊರಬರಲು ಕೆಲವು ಕಾಲ ತೆಗೆದುಕೊಂಡಿರಬೇಕೆಂಬ ವಾದವನ್ನು ಮುಂದಿಡುತ್ತಾರೆ. ಇದಕ್ಕೆ ಪೂರಕವಾಗುವಂತೆ– ಎಸ್.ಹೆಚ್. ಗೋವರ್ಧನ ಎಂಬುವವರು 2020 ರಲ್ಲಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ 'ಕರ್ನಾಟಕ ಶಾಸನಗಳ ಅಧ್ಯಯನ ವಾಗ್ವಾದಗಳು ವಿಮರ್ಶಾತ್ಮಕ ಅಧ್ಯಯನ' ಎಂಬುವದರಲ್ಲಿ ಹೀಗೆ ಹೇಳಿದ್ದಾರೆ "ಕನ್ನಡದ ಅತ್ಯಂತ ಪ್ರಾಚೀನ ಶಾಸನ ಯಾವುದು ಎಂಬ ಪ್ರಶ್ನೆಯನ್ನು ತಮ್ಮಷ್ಟಕ್ಕೇ ತಾವೇ ಆವಾಹಿಸಿಕೊಂಡು ಹಲ್ಮಿಡಿಗಿಂತ ಪ್ರಾಚೀನವಾದ ಕನ್ನಡ ಶಾಸನದ ಶೋಧದಲ್ಲಿ ಪ್ರಸ್ತುತ ಸಂಪ್ರಬಂಧದಲ್ಲಿ ಒಟ್ಟು 7 ಶಾಸನಗಳು ಇದ್ದು ಅವುಗಳೆಂದರೆ– 1.ಜಲಗಾರದಿಬ್ಬನ ಶಾಸನ, 2.ತಾಳಗುಂದದಲ್ಲಿ ದೊರೆತ ಕನ್ನಡದ ಶಾಸನ, 3.ಚಿತ್ರದುರ್ಗ ಕೋಟೆಯಲ್ಲಿರುವ ಶಾಸನ, 4.ಉದ್ಯಾವರ ಶಾಸನ, 5.ತಾಗರ್ತಿಯ ಶಾಸನ, 6.ಗಣಿಗನೂರು ಶಾಸನ, 7. ಗುಣಭೂಷಿತ ಮುನಿಯ ಶ್ರವಣಬೆಳಗೊಳದ ನಿಷಧಿ ಶಾಸನ ಇವುಗಳು ಓಟದ ಸ್ಪರ್ಧೆಯಲ್ಲಿದ್ದರೂ ಯಾವುದೂ ಪೂರ್ಣಪ್ರಮಾಣದಲ್ಲಿ ವಿಜೇತವಾಗಿಲ್ಲ ಎಂದು ಹೇಳಬೇಕಾಗುತ್ತದೆ. ಎಚ್. ಎಸ್. ಗೋಪಾಲರಾಯರು ತಮ್ಮ ಜಲಗಾರದಿಬ್ಬದ ಶಾಸನವನ್ನು ಮೊದಲು ಹಲ್ಮಿಡಿಗಿಂತ ಪ್ರಾಚೀನ ಎಂದು ಕರೆದರೂ, ನಿರಂತರವಾದ ವಾಗ್ವಾದಗಳಿಗೆ ಬೆಲೆ ನೀಡಿ ಅವರು ತಮ್ಮ ವಾದವನ್ನು ಹಿಂತೆಗೆದುಕೊಳ್ಳುವಷ್ಟು ಪ್ರಾಂಜಲವಾದ ಮನಸ್ಥಿತಿಯನ್ನು ಪ್ರದರ್ಶಿಸಿದ್ದಾರೆ. ಷ. ಶೆಟ್ಟರ್ ಅವರು ತಾಗರ್ತಿಯ ಶಾಸನವು ಹಲ್ಮಿಡಿಗಿಂತ ಪ್ರಾಚೀನ ಎಂದ ಮೇಲೆ, ಮತ್ತೆ ಗೋಪಾಲರಾಯರು ಗಣಿಗನೂರು ಶಾಸನವನ್ನು ಈ ಓಟದಲ್ಲಿ ಮುನ್ನೆಲೆಗೆ ತಂದಿದ್ದಾರೆ.

**ಲಿಪಿಗಳ ಉಗಮ ಮತ್ತು ಬೆಳವಣಿಗೆ:** ಲಿಪಿಗಳ ಉಗಮವನ್ನು ಬ್ರಾಹ್ಮಿ ಲಿಪಿಯಿಂದಲೇ ಗುರುತಿಸುವಂತೆ ಅನೇಕ ಸ್ಥಳೀಯ ಮಾರ್ಪಾಡುಗಳೊಂದಿಗೆ ಕನ್ನಡವು ಅಲ್ಲಿಂದಲೇ ಪ್ರಾರಂಭವಾಯಿತು ಎನ್ನಬಹುದು. ಹಲ್ಮಿಡಿಯ ಶಾಸನದಲ್ಲಿ ಉಪಯೋಗಿಸಿರುವ ಕನ್ನಡದಲ್ಲಿ ಕಂಡುಬರುವ ತಾಳಗುಂದ ಸಂಸ್ಕೃತ ಶಾಸನದಲ್ಲಿ ಬಹಳಷ್ಟು ವ್ಯತ್ಯಾಸಗಳು ಕಾಣಿಸುತ್ತವೆ. ಅಲ್ಲದೇ ಬ್ರಾಹ್ಮೀ ಲಿಪಿಯಲ್ಲಿಲ್ಲದ ಶಕಟರೇಫ ಹಾಗೂ ಱ ಳ ಲಿಪಿಗಳನ್ನು ಕಾಣಲು ಸಾಧ್ಯವಿರುವುದರಿಂದ ಆ ಕಾಲಕ್ಕಾಗಲಿ ತನಗೆ ಅವಶ್ಯಕತೆ ಇರುವ ಹೊಸ ಲಿಪಿಗಳನ್ನು ಕನ್ನಡ ಭಾಷೆ ಸೃಷ್ಟಿಸಿಕೊಂಡಿದ್ದು ಕಂಡುಬರುತ್ತದೆ. ಕನ್ನಡ ಲಿಪಿಯು ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಯಾದವ, ಹೊಯ್ಸಳ, ವಿಜಯನಗರ ಕಾಲದ ಮೂಲಕ ಬದಲಾವಣೆಯನ್ನು ಕಂಡು ಇಂದಿನ ರೂಪವನ್ನು ಪಡೆದುಕೊಂಡಿದೆ. ಪ್ರಪಂಚದಲ್ಲಿ ಬಳಕೆಯಲ್ಲಿದ್ದ ಲಿಪಿಗಳನ್ನು ನಾಲ್ಕು ರೀತಿಯಲ್ಲಿ ಬರೆಯುತ್ತಾರೆ.

**ಬಲದಿಂದ ಎಡಕ್ಕೆ:** ಅರಾಮಿಯಾ ಗುಂಪಿಗೆ ಸೇರಿದ ಲಿಪಿಗಳು ಪೊನೀಷಿಯಾ ಗುಂಪಿಗೆ ಸೇರಿದ ಲಿಪಿಗಳು ಮೂಲದಲ್ಲಿ ಬಲದಿಂದ ಎಡಕ್ಕೆ ಬರೆಯುವ ಲಿಪಿಗಳಾಗಿವೆ. ಅದರಂತೆ ಮಧ್ಯಪ್ರಾಚ್ಯದಲ್ಲಿ ಬಳಕೆಯಲ್ಲಿರುವ ಎಲ್ಲಾ ಲಿಪಿಗಳು ಬಲದಿಂದ ಎಡಕ್ಕೆ ಬರೆಯುವ ಲಿಪಿಗಳಾಗಿದ್ದು ತಮ್ಮ ಮೂಲದ ಬರವಣಿಗೆಯ ರೀತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿವೆ.

**ಎಡದಿಂದ ಬಲಕ್ಕೆ:** ಯುರೋಪಿನ ಲಿಪಿಗೆ ಮೂಲವಾದ ಗ್ರೀಕ್ ಲಿಪಿಯು ಮುಂದೆ ಎಡದಿಂದ ಬಲಕ್ಕೆ ಬರೆಯುವ ಲಿಪಿಯಾಗಿ ಮಾರ್ಪಟ್ಟಿತ್ತು.

**ಕೆಳಗಿನಿಂದ ಮೇಲಕ್ಕೆ:** ಕೆಳಗಿನಿಂದ ಮೇಲಕ್ಕೆ ಬರೆಯುವ ಪದ್ಧತಿಯು ಈಗ ಬಳಕೆಯಲ್ಲಿಲ್ಲ. ಆದರೆ ತಾಳಗುಂದದ ಶಾಸನ ಸಾಲುಗಳನ್ನು ಕೆಳಗಿನಿಂದ ಮೇಲಕ್ಕೆ ಬರೆಯಲಾಗಿದೆ. ಆದರೆ ಬರವಣಿಗೆ ಮಾತ್ರ ಎಡದಿಂದ ಬಲಕ್ಕೆ ಬರೆಯಲಾಗಿದೆ.

**ಮೇಲಿನಿಂದ ಕೆಳಕ್ಕೆ:** ಈಜಿಪ್ಟಿನ ಚಿತ್ರಲಿಪಿಯ ಬರವಣಿಗೆಯು ಬಲಗಡೆಯಿಂದ ಎಡಗಡೆ ಮತ್ತು ಮೇಲಿನಿಂದ ಕೆಳಕ್ಕೆ ಬರೆಯುವ ಬರವಣಿಗೆಯಾಗಿತ್ತು. ಚೀನಾ ಲಿಪಿ ಮತ್ತು ಅದರಿಂದ ಜನ್ಯವಾದವುಗಳು ಮೇಲಿನಿಂದ ಕೆಳಕ್ಕೆ ಬರೆಯುವಂತವುಗಳಾಗಿವೆ.

ಶಾಸನಗಳ ಸಾಹಿತ್ಯಕ ಅಧ್ಯಯನ ಕನ್ನಡ ಛಂದಸ್ಸಿನ ತಾಯಿಬೇರಾದ ತ್ರಿಪದಿಯು ಬಾದಾಮಿಯ ಕಪ್ಪೆ ಅರಭಟ್ಟನ ಪ್ರಶಸ್ತಿ ಶಾಸನದಲ್ಲಿ ಕಂಡುಬಂದಿದೆ. ಶ್ರವಣಬೆಳಗೊಳದ ನಂದಿಸೇನ ಪ್ರವರಮುನಿಯ ಶಾಸನ, ರವಿಕೀರ್ತಿಯ ಐಹೊಳೆ ಶಾಸನ, ತಮ್ಮಟಕಲ್ಲಿನ ಶಾಸನಗಳಿಂದ ಶಾಸನಗಳ ಸಾಹಿತ್ಯಕ ಮಹತ್ವವನ್ನು ತಿಳಿಯಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯದ ಮೊದಲ ರೂಪಗಳು ಶಾಸನಗಳಲ್ಲಿ ಕಂಡುಬಂದಿರುವುದರಿಂದ ಶಾಸನಗಳಲ್ಲಿ ಸಾಹಿತ್ಯಕ ಮೌಲ್ಯಗಳನ್ನು ತಿಳಿಯುವುದು ಅಗತ್ಯವಾಗಿದೆ.

**ಎಂ.ಎಂ. ಕಲಬುರ್ಗಿ ಅವರು ಶಾಸನ ಸಾಹಿತ್ಯವನ್ನು ಮೂರು ಭಾಗಗಳನ್ನಾಗಿ ವಿಭಾಗಿಸಿದ್ದಾರೆ:** 1. ನೃಪತುಂಗ ಪೂರ್ವಯುಗ: ನೃಪತುಂಗ ಪೂರ್ವಯುಗವನ್ನು ಶಾಸನ ಸಾಹಿತ್ಯದ ಪ್ರಾರಂಭದ ಯುಗ, 2. ನೃಪತುಂಗೋತ್ತರ ಯುಗ : ಈ ಯುಗವನ್ನು ಪ್ರೌಢಯುಗವೆಂದೂ ಹಾಗೂ 3. ವಿಜಯನಗರ ಯುಗವನ್ನು ಶಾಸನ ಸಾಹಿತ್ಯದ ಪತನದ ಯುಗವೆಂದು ಅವರು ಕರೆದಿದ್ದಾರೆ.

ಶಾಸನ ಗದ್ಯ ಶಾಸನ ಗದ್ಯವು ಬಿರುದಾವಳಿಗಳು, ದಾನದ ವಿವರಗಳು, ದಾನದ ಎಲ್ಲೆಗಳ ವಿವರಗಳು, ಶಾಪಾಶಯ, ವಿವರಗಳಿಂದ ಕೂಡಿರುತ್ತವೆ. ಸಾಮಾನ್ಯವಾಗಿ ಬಿರುದಾವಳಿಗಳು

ಗದ್ಯಾತ್ಮಕವಾಗಿ ಕಂಡುಬಂದಿವೆ. ಕ್ರಿ.ಶ. 1337ರ ತಿಗಡಹಳ್ಳಿ ಶಾಸನವು ಹೊಯ್ಸಳ ಮೂರನೇ ಬಲ್ಲಾಳನನ್ನು "ಶ್ರೀ ಪೃಥ್ವಿವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟಾರಕಂ ದ್ವಾರಾವತೀ ಪುರವರಾಧೀಶ್ವರಂ ಯಾದವಕುಲಾಂಬರದ್ವಿಮಣಿ ಸರ್ವಜ್ಞಚೂಡಾಮಣಿ ಮಲೆರಾಜರರಾಜ ಮಲೆಪರೊಳುಗಂಡ ರಾಯಹುಲಿರಾಯ ಗಂಡಭೇರುಂಡ ಕದನಪ್ರಚಂಡ ಅಸಹಾಯಶೂರ ಸನಿವಾರಸಿದ್ಧಿ ಗಿರಿದುರ್ಗಮಲ್ಲ ಛಲದಂಕರಾಮ ವೈರಿಭಯಂಕರ ಸೈಗೋಲಪಾರ್ಥ ಮಕರರಾಜ್ಯನಿರ್ಮೂಲನ ಚೋಳರಾಜ್ಯಪ್ರತಿಷ್ಠಾಪನಾಚಾರ್ಯ ಪಾಂಡ್ಯರಾಜ್ಯಸಮುದ್ಧರಣ ಭಂಗಿಕರ ಗಂಗವಾಡಿ ನೊಳಂಬವಾಡಿ ಹಾನುಂಗಲ್ಲುಗೊಂಡಗಂಡ ನಿಸ್ಸಂಕಪ್ರತಾಪ ಕಾಂಚಿಕಾಂಚನಕನ್ನಡಿ ಕಾಡವರಾಯ ಆದಿಯಮದೇಸ ಪ್ರವೇಶ ಶ್ರೀವಿಷ್ಣುವರ್ಧನ ಹೊಇಸಳ ಚಕ್ರವರ್ತಿ ಶ್ರೀವೀರಬಲ್ಲಾಳು ದೇವರಸ" ಎಂದು ಹೊಗಳಿದೆ. ಮೂವತ್ತೆರಡು ಸಾಲುಗಳಿಂದ ಕೂಡಿರುವ ಶಾಸನ ಇದಾಗಿದ್ದು ಹದಿನಾರು ಸಾಲುಗಳಲ್ಲಿ ಗದ್ಯರೂಪದ ಬಿರುದುಗಳೇ ಇವೆ.

**ಕಾವ್ಯಗುಣ:** ಕನ್ನಡ ಕಾವ್ಯಗಳಲ್ಲಿ ಕಂಡುಬರುವ ಅಷ್ಟಾದಶವರ್ಣನೆಯನ್ನು ಶಾಸನಗಳಲ್ಲಿಯೂ ಕಾಣಬಹುದು. ಸೂರ್ಯೋದಯ, ಚಂದ್ರೋದಯ, ಪುರವರ್ಣನೆ, ಸಮುದ್ರ, ಶೈಲ, ಋತು, ಉದ್ಯಾನ, ಕ್ರೀಡೆ, ಮಧುಪಾನ, ರಥೋತ್ಸವ, ವಿಪ್ರಲಂಭ, ವಿವಾಹ, ಮಂತ್ರ, ದೂತ, ಪ್ರಯಾಣ, ಪುತ್ರನ ಉದಯ, ಯುದ್ಧ-ಯುದ್ಧಭೂಮಿ, ನಾಯಕನ ಅಭ್ಯುದಯ, ಈ ಹದಿನೆಂಟು ವರ್ಣನೆಗಳಲ್ಲಿ ಒಂದು ವರ್ಣನೆ ಅಥವಾ ಒಂದಕ್ಕಿಂತ ಹೆಚ್ಚು ವರ್ಣನೆಗಳು ಶಾಸನಗಳಲ್ಲಿ ಕಂಡುಬರುತ್ತವೆ.

**ವಾಸ್ತು ಮತ್ತು ಶಿಲ್ಪಶಾಸ್ತ್ರ:** ಶಿಲ್ಪಶಾಸ್ತ್ರಗಳು ಎಂದು ಕರೆಯಲ್ಪಡುವ ಹಲವಾರು ವಾಸ್ತುಶಿಲ್ಪ ಗ್ರಂಥಗಳನ್ನು ಆರಂಭಿಕ ಮಧ್ಯಕಾಲೀನ ಯುಗದಲ್ಲಿ ಬರೆಯಲಾಗಿದೆ. ಇವು ದೇವಾಲಯ ವಾಸ್ತುಶಿಲ್ಪದ ಮೂರು ಪ್ರಮುಖ ಶೈಲಿಗಳನ್ನು ಉಲ್ಲೇಖಿಸುತ್ತವೆ. ಅವುಗಳೆಂದರೆ – ನಾಗರ, ದ್ರಾವಿಡ ಮತ್ತು ವೇಸರ. ನಾಗರ ಶೈಲಿಯು ಹಿಮಾಲಯ ಮತ್ತು ವಿಂಧ್ಯಗಳ ನಡುವಿನ ಪ್ರದೇಶಕ್ಕೆ ಸಂಬಂಧಿಸಿದರೆ, ದ್ರಾವಿಡ ಶೈಲಿಯು ಕೃಷ್ಣ ಮತ್ತು ಕಾವೇರಿ ನದಿಗಳ ನಡುವಿನ ಪ್ರದೇಶಕ್ಕೆ ಸಂಬಂಧಿಸಿದೆ, ಆದರೆ ವೇಸರ ಶೈಲಿಯು ಕೆಲವೊಮ್ಮೆ ವಿಂಧ್ಯ ಮತ್ತು ಕೃಷ್ಣ ನದಿಯ ನಡುವಿನ ಪ್ರದೇಶದೊಂದಿಗೆ ಸಂಬಂಧಿಸಿದೆ. ದೇವಾಲಯ ಶೈಲಿಗಳನ್ನು ವಾಸ್ತವವಾಗಿ ಅಸ್ತಿತ್ವದಲ್ಲಿರುವ ದೇವಾಲಯದ ಅವಶೇಷಗಳ ಆಧಾರದ ಮೇಲೆ ಉತ್ತಮವಾಗಿ ಅಧ್ಯಯನ ಮಾಡಲಾಗುತ್ತದೆ. ಹಾರ್ಡಿ (1995: 7–9) ಅವರು ನಾಗರ ಮತ್ತು ದ್ರಾವಿಡಗಳನ್ನು ವಾಸ್ತುಶಿಲ್ಪದ ಭಾಷೆಗಳಾಗಿ ಅರ್ಥೈಸಿಕೊಳ್ಳಬೇಕು ಎಂದು ಸೂಚಿಸುತ್ತಾರೆ.

ಶಾಸನೋಕ್ತ ನೃತ್ಯ ಕಲಾವಿದೆಯರು ಸಂಗೀತ ಪ್ರಸಂಗ ವಿವೇಕ ಚೂಡಾಮಣಿ ಎಂಬ ಬಿರುದನ್ನು ಗಳಿಸಿಕೊಂಡಿದ್ದ ಚಾಲುಕ್ಯ ತ್ರಿಭುವನಮಲ್ಲನ ಪತ್ನಿ ಚಂದಲದೇವಿಯನ್ನು; ಅಭಿನಯಸರಸ್ವತಿ, ನೃತ್ಯ ವಿದ್ಯಾಧರಿ ತ್ರಿಭುವನಮಲ್ಲನ ಪಟ್ಟಮಹಿಷಿಯಾಗಿದ್ದ ಕೇತಲದೇವಿಯನ್ನು ಅನೇಕ ದೇಶ ಭಾಷಾ ಸಂಗೀತ ವಿದ್ಯಾಧರಿ ಎಂದು 1090 ರ ಶಾಸನವು ಹೇಳಿದೆ. ಕದಂಬ ಜಯಸಿಂಹನ ತಾಯಿ ಮೇಚಲದೇವಿ ಅತಿಚತುರೋಕ್ತಿಯೊಳ್ ಸರಸ್ವತಿ ಮಿಗಿಲು ಎಂದು ಕರೆಯಿಸಿಕೊಂಡಳು. ಆರನೆಯ ವಿಕ್ರಮಾದಿತ್ಯನ ರಾಣಿಯರಲ್ಲಿ ಬಹುಮಂದಿ ರಾಜಕೀಯದಲ್ಲಿ ಮತ್ತು ಸಾಹಿತ್ಯಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದರು. ಪಟ್ಟಮಹಿಷಿಯಾಗಿದ್ದ ಮೈಳಲದೇವಿಯು ಕಲಿಕಾಲ ಸರಸ್ವತಿ ಸಾಹಸ ವಿದ್ಯಾಧರಿ, ಸಕಲ ಕಲಾವತಿ ಎಂದೆನಿಸಿಕೊಂಡಿದ್ದಳು. "ಜಾಕಲದೇವಿಯು ಕಲಿಕಾಲಪಾರ್ವತಿ ಅಭಿನವಸರಸ್ವತಿ ರಾಯ ಚೇತೋದಶೀಕರಣ ಕರಣವಿದ್ಯಾಧರಿ ಸಕಲಕಳಾಧರಿ ಎಂದಿದೆ. ಚಂದಲದೇವಿ

ನೃತ್ಯ ವಿದ್ಯಾಧರಿ ಕಲಿಕಾಲಸರಸ್ವತಿ ಎಂದು, ಮಲಯವತಿಯು ಶ್ರೀಮದಭಿನಯ ಸರಸ್ವತಿ ಮೃದುಮಧುರವಚನರಚನೆ ಚತುರಕಲಾಪೆಯೆಂದು ಕ್ರಿ.ಶ 1107 ರ ಶಾಸನವೊಂದು ಹೇಳಿದೆ. "ಅಬ್ಬಲದೇವಿಯು ಸಕಲಕಳಾಧರಿ" ಎಂದು ಪ್ರಸಿದ್ಧಿಯನ್ನು ಪಡೆದಿದ್ದಳು. ತ್ರಿಭುವನಮಲ್ಲ ಮಲ್ಲಿದೇವ ಚೋಳಮಹಾರಾಜನ ರಾಣಿಯಾದ ಲಕ್ಷ್ಮಿದೇವಿಯು ತನ್ನ ಪತಿಯೊಡನೆ ಪಾಲುದಾರಳಾಗಿ ರಾಜ್ಯವಾಳಿದಳೆಂದು ಮತ್ತು ಅವಳು ಕಾವ್ಯ, ಸಾಹಿತ್ಯ, ಕಲೆ, ಗಾನ, ವಾದ್ಯ ಸಂಗೀತಗಳಲ್ಲಿ ಮತ್ತು ನೃತ್ಯಶಾಸ್ತ್ರಗಳಲ್ಲಿ ಪ್ರವೀಣಳಾಗಿದ್ದಳೆಂದು ವರ್ಣಿಸಿದೆ. ಮೇಲೆ ಹೇಳಿದ ಸ್ತ್ರೀಯರೆಲ್ಲರೂ ಕಲಾಸಕ್ತಿಯುಳ್ಳವರಾಗಿದ್ದರು ಕಲೆಯನ್ನು ಕಲಿತು ಅದನ್ನು ಪ್ರದರ್ಶಿಸುತ್ತಿದ್ದರು. ಇದರಿಂದ ರಾಜರ ಮನಸ್ಸನ್ನು ತಮ್ಮತ್ತ ಒಲಿಸಿಕೊಳ್ಳುವುದರಲ್ಲಿ ಸಫಲರಾದಂತೆ ಕಂಡು ಬರುತ್ತದೆ.

ನೃತ್ಯಕಲೆಯನ್ನು ತನ್ನ ಜೀವನದ ಒಂದು ಅವಿಭಾಜ್ಯ ಅಂಗವೆಂಬಂತೆ ಪೋಷಿಸಿಕೊಂಡು ಬಂದವಳು ಮಹಾಮಂಡಳೇಶ್ವರ ಗಂಗಪೆರ್ಮಾಡಿಯ ಪತ್ನಿ ಬಾಚಲದೇವಿ. ನೃತ್ಯವಿದ್ಯಾ ಪ್ರಭಾವ ಪ್ರಭೂತನಿಮ್ಮ ನಳಯ ಶೋಭಾಸಿನಿ ಸ್ಥಾನಪಾತ್ರಮುಕುಮಣ್ಯನೆ ಪ್ರತಿಪಕ್ಷಅರಿಬಿರುದ ಪಾತ್ರ ಜಗದಲೆ ಎಂಬ ಹಲವು ವಿಶಿಷ್ಟ ಬಿರುದುಗಳನ್ನು ಈಕೆ ಪಡೆದುಕೊಂಡಿದ್ದಳು. ವೀರಪಾತ್ರಗಳನ್ನು ನೃತ್ಯಕೌಶಲ್ಯದ ಮೂಲಕ ತೋರ್ಪಡಿಸುವುದು ಬಾಚಲದೇವಿಯ ಪ್ರಮುಖ ಕಲಾವಿದ್ಯೆಯಾಗಿತ್ತು. ಕ್ರಿ.ಶ. 1113 ರ ಆಲಹಳ್ಳಿಯ ಶಾಸನವೊಂದು ಅವಳ ನರ್ತನ ವೈಖರಿಯನ್ನು ವರ್ಣಿಸುತ್ತಾ, ಮದೋನ್ಮತ್ತರಾದ ವೈರಿರಾಜನನ್ನು ರಣಾಂಗಣದಲ್ಲಿ ಎದುರಿಸಿ ತನ್ನ ಪದಗಳಿಗೆ ನಮಸ್ಕರಿಸುವಂತೆ ಮಾಡುತ್ತಿದ್ದ ತನ್ನ ಪತಿಯ ಪೊಡರ್ಪನ್ನು ನಾಟಕವಾಗಿ ಅಭಿನಯಿಸಿ ತೋರಿಸುತ್ತಿದ್ದಳೆಂದು ತಿಳಿಸಿದೆ. ಕದಂಬ ಜಯಸಿಂಹನ ತಾಯಿ ಮೇಚಲದೇವಿ ಅತಿ ಚತುರೋಕ್ತಿಯೊಳ್ ಸರಸ್ವತಿ ಮಿಗಿಲು ಎಂದು ಕರೆಯಿಸಿಕೊಂಡಳು, 'ಸಂಗೀತ ಸಂಗತ ಸರಸ್ವತಿ', 'ವಿಚಿತ್ರನರ್ತನ ಪ್ರವರ್ತನ ಪಾತ್ರ ಶಿಖಾಮಣಿ', 'ಗೀತವಾದ್ಯ ನೃತ್ಯ ಸೂತ್ರಧಾರೆ', 'ಭರತಾಗಮದ ತಿರುಳೆ ನಿಸಲುಭಯಕ್ರಮನೃತ್ಯ', 'ಸುತಿಯೊಳ್ ಸರದೊಳ್ ಗ್ರಾಮದ್ವಿತಯದೊಳ್ ಮುರ್ಚ್ಛನಾಳಿಯೊಳ್', 'ರಾಗಬ್ರತತಿಯೊಳ್', ಶಾಂತಿದೇವಿ ಸಲೆರಂಜಿಸುಗುಂ. ಸ್ವತಃ ಪಟ್ಟಮಹಿಷಿಯಾಗಿ ಕಲಾಸಾಮ್ರಾಜ್ಞೆಯಾಗಿದ್ದ ಶಾಂತಲೆಗೆ ಶಿಕ್ಷಣಕ್ಷೇತ್ರದಲ್ಲಿ ಪರಿಶ್ರಮವಿದೆ. ಅಂದು ರಾಜಮನೆತನಗಳಿಗೆ ಸೇರಿದ ಮಹಿಳೆಯರು ಗಾಯನ, ವಾದನ ಮತ್ತು ನೃತ್ಯಗಳಲ್ಲಿ ತರಬೇತಿ ಹೊಂದುತ್ತಿದ್ದರು. ಬಹುಶಃ ಸಂಗೀತ ನಾಟ್ಯಶಾಸ್ತ್ರಕ್ಕೆ ಉನ್ನತಿ ತಂದುಕೊಟ್ಟಿದ್ದು ಶಾಂತಲೆಯೇ ಇರಬೇಕು. ಈಕೆಯ ಅನೇಕ ನೃತ್ಯ ಭಂಗಿಗಳು ಶಿಲ್ಪಗಳಿಗೆ ಸ್ಫೂರ್ತಿಯನ್ನು ಒದಗಿಸಿರಬೇಕು.

ಶಾಸನಗಳಲ್ಲಿ ಶಿವಶರಣರು ಕನ್ನಡ ನಾಡು ಶರಣರ ನಾಡೆಂದೇ ಪ್ರಚಲಿತವಾಗಿದೆ. ಬಸವಪೂರ್ವ ಯುಗದ ಶರಣ ಕೊಂಡಗುಳಿ ಕೇಶೀರಾಜ, ದೇವರ ದಾಸಿಮಯ್ಯ, ವೀರಶೈವ ಚಳುವಳಿಯ ನೇತಾರರಾದ ಬಸವೇಶ್ವರ, ಮಡಿವಾಳ ಮಾಚಿದೇವ, ಹಾವಿನಾಹಾಳ ಕಲ್ಲಯ್ಯ, ಚನ್ನಬಸವಣ್ಣ, ಸೊನ್ನಲಿಗೆಯ ಸಿದ್ಧರಾಮ ಮತ್ತು ನೆಲುವಿಗೆಯ ಸಾಂತಯ್ಯ ಮುಂತಾದ ಶರಣರ ಕಾರ್ಯಕ್ಷೇತ್ರವು ಇದಾಗಿದೆ. ಬಸವಪೂರ್ವದಲ್ಲಿ ಕಂಡುಬರುವ ಶಿವಶರಣರಲ್ಲಿ ಕೊಂಡಗೂಳಿ ಕೇಶಿರಾಜ ಅಗ್ರಗಣ್ಯನು. ಕನ್ನಡದ ವೀರಶೈವ ಕವಿಗಳಲ್ಲಿ ಮೊದಲಿಗನಾಗಿ ಕಲ್ಯಾಣದ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ (ಕ್ರಿ.ಶ. 1076–1126) ದಂಡಾಧೀಶನಾಗಿ ಕನ್ನಡ ನಾಡಿನ ಧಾರ್ಮಿಕ ಸಾಹಿತ್ಯಕ ಹಾಗೂ ರಾಜಕೀಯ ಇತಿಹಾಸದಲ್ಲಿ ದೊಡ್ಡ ಹೆಸರು ಗಳಿಸಿಕೊಂಡಿದ್ದಾನೆ. ಕಲ್ಯಾಣದ ಚಾಲುಕ್ಯ ನಾಲ್ಕನೆಯ ಸೋಮೇಶ್ವರ ಕಾಲಕ್ಕೆ ಸೇರಿದ ಕ್ರಿ.ಶ. 1184 ರ ತಾಳಿಕೋಟೆಯ ಶಾಸನ, ಈ ಶಾಸನವು ಮಹಾಮಂಡಳೇಶ್ವರ ವಿರೂಪರಸನು

ದೇವಾಲಯದ ಗಣಂಗಳಿಗಾಗಿ ವೀರದಾಸನಿಗೆ ಗಣಮಠಕ್ಕೆ ನೀಡಿದ ಭೂ ದಾನದ ವಿವರವನ್ನು ಒಳಗೊಂಡಿದೆ. ಪರಿಯಳಿಗೆ, ಅಣಿಲೆವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪುರ, ಕರಹಾಡ, ಕೆಂಭಾವಿ ಮತ್ತು ಬೊಮ್ಮಕೂರು ಗ್ರಾಮಗಳಲ್ಲಿ ಪರಸಮಯವನ್ನು ಧ್ವಂಸಗೊಳಿಸಿ ಶಿವಸಮಯವನ್ನು ಉಜ್ವಲಗೊಳಿಸಿದ ಶಿವಶರಣರನ್ನು ಉಲ್ಲೇಖಿಸುತ್ತದೆ. ಅಲ್ಲದೇ ಶಿವಲಿಂಗ ಸಿಂಹಾಸನವನ್ನು ಸ್ಥಾಪಿಸುವುದರ ಮೂಲಕ ಸ್ಥಾವರ ಲಿಂಗಪೂಜೆಯನ್ನು ಮನ್ನಿಸಿರುವುದನ್ನು ಗಮನಿಸಬಹುದಾಗಿದೆ. ಮೇಲಿನ ಹತ್ತು ಗ್ರಾಮಗಳಲ್ಲಿ ಇದ್ದ ಶಿವಶರಣರೆಂದರೆ ಅಣಂಪುರದ ಗುಡ್ಡವ್ವೆ, ಮಾರುಡಿಗೆಯ ನಾಚಯ್ಯ, ಪರಿಯಳಿಗೆಯ ವೈಜಕವ್ವೆ, ಕೆಂಭಾವಿಯ ಭೋಗಣ್ಣ, ಅಬ್ಬಲೂರಿನ ಏಕಾಂತ ರಾಮಯ್ಯ, ಇನ್ನುಳಿದ ಐದು ಗ್ರಾಮಗಳಾದ ಅಣಲೆವಾಡ, ಉಣಕಲ್ಲು, ಸಂಪಗಾವಿ, ಕರಹಾಡ ಮತ್ತು ಬಮ್ಮಕೂರುಗಳಲ್ಲಿ ಇದ್ದ ಶರಣರ ಬಗ್ಗೆ ತಿಳಿದು ಬಂದಿಲ್ಲ. ಇವರಲ್ಲಿ ಕೆಲವರು ಬಸವನಿಗೆ ಸಮಕಾಲೀನರು ಇನ್ನೂ ಕೆಲವರು ಬಸವಪೂರ್ವ ಯುಗದವರು. ಕಿರಿಯಿಂಡಿಯಲ್ಲಿಯ ಕ್ರಿ.ಶ. 1197 ರ ಶಾಸನವೊಂದರಲ್ಲಿ 'ದೊಡರದಾಸನ ಉಲ್ಲೇಖವಿದೆ.

ಬಸವಣ್ಣನವರನ್ನು ಉಲ್ಲೇಖಿಸುವ ಒಟ್ಟು 21 ಶಾಸನಗಳು ಲಭ್ಯವಾಗಿದ್ದರೂ ಅವೆಲ್ಲವೂ ಒಪ್ಪಿಕೊಳ್ಳುವಂತಹವುಗಳಲ್ಲ ಹೀಗಾಗಿ ವಿದ್ವಾಂಸರು ಒಪ್ಪಿಕೊಂಡಿರುವ ಶಾಸನಗಳೆಂದರೆ ಹಿರಿಯೂರು ಶಾಸನ, ಅರ್ಜುನವಾಡ ಶಾಸನ, ಚೌಡದಾನಪುರದ ಎರಡು ಶಾಸನಗಳು, ಕಲ್ಲೇದೇವಪುರ ಶಾಸನ, ಮರಡಿಪುರ ಶಾಸನ, ಮಂಡ್ಯ ಶಾಸನ, ನಾಗಾಲೋಟ ಶಾಸನ, ಜೋಡಿದಾಸೇನಹಳ್ಳಿ ಶಾಸನ, ಆನಂದಪುರ ಸಂಸ್ಥಾನ ಮಠದ ತಾಮ್ರ ಶಾಸನ, ಕಾನಕಾನಹಳ್ಳಿ ತಾಮ್ರ ಶಾಸನ 1 ಮತ್ತು 2.

ಇಂಡಿ ತಾಲೂಕಿನ ಭೋಯಾರ ಗ್ರಾಮದ ಕ್ರಿ.ಶ. 1162 ರ ಶಾಸನವೊಂದರ ಪ್ರಾರಂಭದಲ್ಲಿ "ನೆಲುವಿಗೆಯ ಸಾತ್ಯೆಯ್ಯಗಳ ಶ್ರೀಪಾದಗಳೇ ಶರಣು "ಓಂ ನಮಃ ಶಿವಾಯ" ಎಂದೇ ಪ್ರಾರಂಭವಾಗುತ್ತದೆ. ಇಂಡಿ ತಾಲೂಕಿನ ಹಿರೇಬೇವಿನೂರ ಶಾಸನದಲ್ಲಿ ರೇವಣಸಿದ್ದನ ಉಲ್ಲೇಖವಿದೆ. ಸಿದ್ದರಾಮ ಶಿವಯೋಗಿಯ ಜನನ ಭವಿಷ್ಯ ನುಡಿದ ಮಂಗಳವಾಡ ಪ್ರದೇಶದಲ್ಲಿ ಶೈವ ಮತದ ರೇವಣಸಿದ್ಧ ಮತ್ತು ವೀರಶೈವ ಪಂಚಾಚಾರ್ಯರಲ್ಲೊಬ್ಬನಾದ ರೇವಣಸಿದ್ದರು ಭಿನ್ನರೋ ಅಭಿನ್ನರೋ ಎಂಬ ಪ್ರಶ್ನೆಯೂ ಇದೆ. ಬಸವನ ಬಾಗೇವಾಡಿ ತಾಲೂಕಿನ ಮಸೂತಿ ಗ್ರಾಮದಲ್ಲಿರುವ ಕ್ರಿ.ಶ. 1157 ರ ಕಲ್ಯಾಣದ ಚಾಲುಕ್ಯ ಮೂರನೆಯ ತೈಲಪನ ಶಾಸನದಲ್ಲಿ ರೇವಣೇಶ್ವರ ದೇವಾಲಯಕ್ಕೆ ಗ್ರಾಮದ ದಾಸಿಮಯ್ಯನ ಮಗಳಾದ ಕಾಳಿಯವ್ವೆಯು ದಾನ ನೀಡಿರುವುದನ್ನು ಹೇಳಿದೆ.

ಕಲ್ಯಾಣವು ವೀರಶೈವ ಆಂದೋಲನಕ್ಕೆ ಬಸವಣ್ಣನವರು ಕೇಂದ್ರ ಶಕ್ತಿ ಎನಿಸಿದಂತೆ ಅದೇ ಕಾಲದ ಸೊನ್ನಲಿಗೆಯ ಶೈವ ಆಂದೋಲನಕ್ಕೆ ಕೇಂದ್ರ ಶಕ್ತಿ ಎನಿಸಿದವನು ಸಿದ್ದರಾಮ ಶಿವಯೋಗಿ. ವೀರಶೈವಕ್ಕೆ ಕಡಿಮೆಯಲ್ಲದ ರೀತಿಯಲ್ಲಿ ಶೈವವನ್ನು ಬೆಳಗಿಸಲು ನಿರತನಾಗಿದ್ದ ಈತನು ವೀರಶೈವ ದೀಕ್ಷೆಯನ್ನು ಪಡೆಯುವಲ್ಲಿ ಪರಮ ಯೋಗವನ್ನು ಮೆಚ್ಚಿ ಶಿವಯೋಗವನ್ನು ಮುಟ್ಟಿದವನು. ಕಲ್ಯಾಣದ ಪ್ರಖ್ಯಾತ ಶರಣರಲ್ಲೊಬ್ಬನಾಗಿರುವ ಸಿದ್ಧರಾಮನನ್ನು ಕುರಿತು ಈವರೆಗೆ 33ಕ್ಕೂ ಹೆಚ್ಚು ಶಾಸನಗಳು ಲಭ್ಯವಾಗಿದ್ದು, ಈ ಶಾಸನಗಳಲ್ಲಿ ಸಿದ್ದರಾಮನು ಬರೆದಿರುವ ಗುರುವಚನ, ಆಜ್ಞಾವಚನ ಅಥವಾ ಕ್ಷೇತ್ರಪ್ರತಿಪಾಳಕ ಎಂಬ ವಚನ ಭಾಗವನ್ನು ಶಾಸನದ ಆರಂಭದಲ್ಲಿ ಪ್ರಾರ್ಥನಾ ಪದ್ಯವಾಗಿ ಹಾಗೂ ಶಾಪಾಶಯದ ಭಾಗವಾಗಿ ಶಾಸನಕಾರರು ಉಪಯೋಗಿಸಿಕೊಂಡಿದ್ದಾರೆ. ಬಸವನ ಬಾಗೇವಾಡಿ ತಾಲೂಕಿನ ಕುದರಿ ಸಾಲವಾಡಗಿ ಗ್ರಾಮದ ಶಾಸನದಲ್ಲಿ ಶರಣ ಮೂರುಜಾವಿ ಮುನಿಯ ಉಲ್ಲೇಖ ಬರುತ್ತದೆ.

ಕ್ರಿ.ಶ. 1059 ರಿಂದ ಕ್ರಿ.ಶ. 1238 ರ ವರೆಗಿನ ಮಧ್ಯದಲ್ಲಿ ಸುಮಾರು 17 ಶಾಸನಗಳಲ್ಲಿ ಮೂರು ಜಾವಿದೇವನ ಹೆಸರುಗಳು ಕಂಡು ಬರುತ್ತವೆ. ಹಿರೇಮಾಗಳಗೇರಿ ಕ್ರಿ.ಶ. 1059 ರ ಶಾಸನವು ಮೊದಲನೆಯ ಶಾಸನವಾಗಿದ್ದರೆ ಕಾಲದ ಉಲ್ಲೇಖವಿಲ್ಲದ ಸಾಲವಾಡಿಗಿಯ ಶಾಸನವು ಕೊನೆದಾಗುತ್ತದೆ. ಹೀಗೆ ಕಾಲದ ಅಂತರದಿಂದಾಗಿ ಸುಮಾರು 3 ಜನ ಮೂರುಜಾವಿ ದೇವರುಗಳು ಆಗಿಹೋಗಿರಬಹುದೆಂದು ಈ ಮೊದಲು ತರ್ಕಿಸಲಾಗಿತ್ತು. ಆದರೆ ಈಗ ಸುಮಾರು 5 ಜನ ಮೂರುಜಾವಿ ಮುನಿಗಳಾದರೂ ಆಗಿರಬಹುದೆಂದು ಗುರುತಿಸಲಾಗಿದೆ. ಈ ಮೇಲಿನ ಶಾಸನಗಳನ್ನು ಅವಲೋಕಿಸಿದರೆ ಕನ್ನಡನಾಡು ಶರಣರ ಬೀಡು ಸಂತರನಾಡು ಎಂದು ಕರೆದಿರುವ ವಿಜಯಪುರ ಜಿಲ್ಲೆಯಲ್ಲಿ ಅನೇಕ ಶರಣರು ಶಾಸನೋಕ್ತವಾಗಿರುವುದು ಕಂಡು ಬರುತ್ತದೆ.

**ಐತಿಹಾಸಿಕ ಕಾವ್ಯಗಳು:** ಕನ್ನಡ ನಾಡಿನ ಇತಿಹಾಸವನ್ನು, ಇಲ್ಲಿ ಆಳಿದ ಅರಸರನ್ನು ಕುರಿತು ಅನೇಕ ಕನ್ನಡ ಮತ್ತು ಸಂಸ್ಕೃತ ಸಮಕಾಲೀನ ಕಾವ್ಯಗಳು ಹೊರಬಂದಿದ್ದು ಅವುಗಳಲ್ಲಿ ಕೆಲವನ್ನು ಉಲ್ಲೇಖಿಸುತ್ತೇನೆ.

**ಪಂಪ ಭಾರತ ಅಥವಾ ವಿಕ್ರಮಾರ್ಜುನ ವಿಜಯ:** ಪಂಪ ಚಾಲುಕ್ಯರ ದೊರೆ ಎರಡನೆಯ ಅರಿಕೇಸರಿಯ ಆಸ್ಥಾನದಲ್ಲಿದ್ದವನು. ಇವನು ಆದಿಪುರಾಣ ಎಂಬ ಆಗಮಿಕ ಕೃತಿಯನ್ನು, ವಿಕ್ರಮಾರ್ಜುನ ವಿಜಯ ಎಂಬ ಲೌಕಿಕ ಗ್ರಂಥವನ್ನು ರಚಿಸಿದ್ದಾನೆ. ಪ್ರಸಿದ್ಧವಾದ ಪುರಾಣ ವಸ್ತುವನ್ನು ಆಯ್ದುಕೊಂಡು ಅದರ ನಾಯಕನೊಂದಿಗೆ ತನ್ನ ಆಶ್ರಯಧಾತ ಅರಸನನ್ನು ಸಮೀಕರಿಸಿ ಕಾವ್ಯವನ್ನು ರಚಿಸಿದ್ದಾನೆ.

**ಪೊನ್ನನ ಭುವನೈಕ ರಾಮಾಭ್ಯುದಯ:** ಪೊನ್ನ ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕೃಷ್ಣನ ಆಸ್ಥಾನದಲ್ಲಿದ್ದು ಅವನಿಂದ ಕವಿ ಚಕ್ರವರ್ತಿ ಎಂಬ ಬಿರುದನ್ನು ಪಡೆದವನು, ಇವನ ಕಾಲ ಸುಮಾರು 950. ಇವನು ಶಾಂತಿ ಪುರಾಣ ಎಂಬ ಆಗಮಿಕ ಕಾವ್ಯವನ್ನು, ಭುವನೈಕ ರಾಮಾಭ್ಯುದಯ ಎಂಬ ಲೌಕಿಕ ಕಾವ್ಯವನ್ನು ಹಾಗೂ ಜಿನಾಕ್ಷರ ಮಾಲೆ ಎಂಬ ಕೃತಿಯನ್ನು ರಚಿಸಿದ್ದಾನೆ. ರಾಷ್ಟ್ರಕೂಟರ ಅರಸ ಮೂರನೇ ಕೃಷ್ಣನನ್ನು ರಾಮನೊಂದಿಗೆ ಸಮೀಕರಿಸಿ ರಚಿಸಿರಬಹುದಾದ ಭುವನೈಕ ರಾಮಾಭ್ಯುದಯ ನಮಗೆ ಇನ್ನೂ ಉಪಲಬ್ಧವಿಲ್ಲ. ಆದರೂ ಅನ್ಯ ಗ್ರಂಥಗಳಲ್ಲಿ ಉದ್ಧೃತವಾಗಿರುವ ಬಿಡಿ ಪದ್ಯಗಳನ್ನು ನೋಡಿದರೆ ಪೊನ್ನನ ಈ ಕೃತಿ ಉತ್ತಮವಾಗಿದೆ ಎನ್ನಬಹುದು.

**ರನ್ನನ ಗದಾಯುದ್ಧ:** ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ಇರವಬೆಡಂಗ ಸತ್ಯಾಶ್ರಯ ರಾಜನ ಆಸ್ಥಾನ ಕವಿಯಾಗಿದ್ದ ರನ್ನ. ರಾಜನಿಂದ ಕವಿ ಚಕ್ರವರ್ತಿ ಎಂಬ ಬಿರುದನ್ನು ಪಡೆದವನು. ಇವನು ಅಜಿತಪುರಾಣ, ಗದಾಯುದ್ಧ ಅಥವಾ ಸಾಹಸಭೀಮವಿಜಯ, ರನ್ನ ಕಂದ, ಚಕ್ರೇಶ್ವರ ಚರಿತ ಮತ್ತು ಪರಶುರಾಮ ಚರಿತಗಳನ್ನು ರಚಿಸಿದನು. ಗದಾಯುದ್ಧ ಅಥವಾ ಸಾಹಸಭೀಮ ವಿಜಯವು ಕಡಿಮೆ ವ್ಯಾಪ್ತಿಯ ಕಾವ್ಯವಾಗಿದ್ದು, ಮಹಾಭಾರತ ಯುದ್ಧದ ಅಂತಿಮ ಭಾಗವನ್ನು ವಸ್ತುವಾಗಿ ಹೊಂದಿದೆ. ತನ್ನ ಪೋಷಕನಾದ ಸತ್ಯಾಶ್ರಯನನ್ನು ಕಥಾನಾಯಕ ಭೀಮನೊಂದಿಗೆ ಹೋಲಿಸಿ ಅವನನ್ನು ಸಾಹಸಭೀಮ ಎಂದು ಕರೆದಿದ್ದಾನೆ.

**ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ:** ಕನ್ನಡ ಕಾವ್ಯಗಳ ಅಮೂಲ್ಯ ಭಂಡಾರವೆನಿಸಿದ ಈ ಕೃತಿ ಹೊಯ್ಸಳ ಇತಿಹಾಸಕಾರನಿಗೆ ಬಹಳ ಸ್ವಾರಸ್ಯಕರವಾದ ಕೃತಿಯಾಗುತ್ತದೆ. ಕವಿಯು ಸಳನಿಂದ ಮೊದಲುಗೊಂಡು ವೀರಸೋಮೇಶ್ವರನವರೆಗೆ ಹೊಯ್ಸಳ ವಂಶಾವಳಿಯನ್ನು ನೀಡುತ್ತಾನೆ. ಕೃತಿಯ ಉದ್ದಕ್ಕೂ ಎರಡನೆಯ ನರಸಿಂಹ ಮತ್ತು ವೀರ ಸೋಮೇಶ್ವರರ

ಉಲ್ಲೇಖ ಬರುತ್ತದೆ. ವೀರ ಸೋಮೇಶ್ವರರ ಪರಾಕ್ರಮವನ್ನು ಸಾಮರ್ಥ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ.

**ಬಿಲ್ಲಣನ ವಿಕ್ರಮಾಂಕ ದೇವಚರಿತೆ:** ಚಾಲುಕ್ಯ ಆರನೆಯ ವಿಕ್ರಮಾದಿತ್ಯನಿಂದ ವಿದ್ಯಾಪತಿ ಎಂಬ ಬಿರುದನ್ನು ಗಳಿಸಿದ ಬಿಲ್ಲಣ ವಿಕ್ರಮಾಂಕ ದೇವಚರಿತೆ ಎಂಬ ಐತಿಹಾಸಿಕ ಜೀವನ ಚರಿತ್ರೆಯನ್ನು ರಚಿಸಿದನು. ಬಾಣನು ತನ್ನ ಗದ್ಯಕಾವ್ಯ ಹರ್ಷ ಚರಿತೆಯಿಂದ ತನ್ನ ಪೋಷಕನಿಗೆ ಹೇಗೆ ಸೇವೆ ಸಲ್ಲಿಸಿದನೋ, ಹಾಗೆಯೇ ಬಿಲ್ಲಣನು ಈ ಕೃತಿಯಿಂದ ತನ್ನ ಸ್ವಾಮಿಗೆ ಸೇವೆ ಸಲ್ಲಿಸಿದನು. ಇದೊಂದು ಮೇಲು ಮಟ್ಟದ ಮಹಾಕಾವ್ಯವಾಗಿದೆ. ಸಂಸ್ಕೃತದ ಅತ್ಯುತ್ತಮ ಕೃತಿಗಳಲ್ಲಿ ಒಂದಾಗಿದೆ. ಇದರಲ್ಲಿ ಆರನೆಯ ವಿಕ್ರಮಾದಿತ್ಯನ ಜೀವನ ಮತ್ತು ಸಾಧನೆಗಳ ವಿವರಗಳಿವೆ.

**ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಕೆಲವು ಪ್ರಮುಖ ಕವಯತ್ರಿಯರು:** ಎರಡನೆಯ ಪುಲಕೇಶಿಯ ಮಗನಾದ ಚಂದ್ರಾದಿತ್ಯನ ಮಡದಿ, ವಿಜಯ ಭಟ್ಟಾರಿಕೆಯಿಂದ ರಚಿತವಾದದ್ದೆಂದು ಪ್ರತೀತಿ ಇರುವ ಕೌಮುದಿ ಮಹೋತ್ಸವ ನಾಟಕವು ಚಾಲುಕ್ಯರ ಕಾಲದ ಸುಪ್ರಸಿದ್ಧ ಕೃತಿಯಾಗಿದೆ. ದಂಡಿಯು ತನ್ನ ಕಾವ್ಯಾದರ್ಶದಲ್ಲಿ ವಿದ್ಯಾಧಿದೇವತೆಯಾದ ಸರಸ್ವತಿಯನ್ನು ಸರ್ವಶುಕ್ಲಾ ಸರಸ್ವತಿ ಎಂದು ಸ್ತುತಿಸಿದ್ದಾನೆ. ಈ ಬಣ್ಣನೆಯನ್ನು ವಿಜಯಭಟ್ಟಾರಿಕೆ ಕಂಡು ಕರುಬಿದಳಂತೆ. ಹಾಗೆ ಕರುಬಿದವಳು ತನ್ನ ರೋಷವನ್ನು ಅಡಗಿಸಲಾರದೆ 'ನೀಲೋತ್ಪಲದಲ ಶ್ಯಾಮಲೆಯಾದ ನನ್ನನ್ನು ಆ ದಂಡಿ ಕಂಡಿರಲಿಲ್ಲ, ಕಂಡಿರುತ್ತಿದ್ದರೆ ಸರಸ್ವತಿಯನ್ನು ಶುಕ್ಲವರ್ಣೆಯೆಂದು ಅವನು ಬಣ್ಣಿಸುತ್ತಿರಲಿಲ್ಲ'ವೆಂದು ಹೇಳುತ್ತಾಳೆ.

1993ರಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಪ್ರಕಟಿಸಿರುವ ಸಮಗ್ರ ವಚನ ಸಂಪುಟ ಇದರಲ್ಲಿ 33 ವಚನಕಾರ್ತಿಯರ ಉಲ್ಲೇಖವಿದೆ. ಇವರಲ್ಲಿ ಅಕ್ಕಮಹಾದೇವಿ, ಅಕ್ಕ ನಾಗಮ್ಮ, ಅಕ್ಕಮ್ಮ, ಅಮ್ಮುಗೆಯ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಕದರಿ ಕಾಯಕದ ಕಾಳವ್ವೆ, ಸಿದ್ದಿ ಬುದ್ದಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಕದಿರಿ ರಮ್ಮವ್ವೆ, ಕನ್ನಡಿ ಕಾಯಕದ ರೇವಮ್ಮ, ಕೊಂಡಿ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ, ಕೊಟ್ಟನದ ಸೋಮವ್ವೆ, ಗಂಗಾಂಬಿಕೆ, ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ, ಗೊಗ್ಗವ್ವೆ, ದಾಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ದುಗ್ಗಳೆ, ನೀಲಲೋಚನೆ, ಬೊಂತಾದೇವಿ, ಮುಕ್ತಾಯಕ್ಕ, ಮೋಳಿಗೆಯ ಮಹಾದೇವಿಯಮ್ಮ, ರೇವಣಸಿದ್ದಯ್ಯಗಳ ಪುಣ್ಯಸ್ತ್ರೀ ರೇಕಮ್ಮ, ಸತ್ಯಕ್ಕ, ಸೂಳೆ ಸಂಕವ್ವೆ, ಹಡಪದ ಲಿಂಗಮ್ಮ, ಉಭಯಭಾರತಿ.

**ಕಂತಿ:** ಸುಮಾರು 1100 ರಲ್ಲಿದ್ದ ಕಂತಿ ಹೊಯ್ಸಳ ದೊರೆ ಒಂದನೆಯ ಬಲ್ಲಾಳನ ಆಸ್ಥಾನದ ಮಹಾನ್ ಕನ್ನಡ ಕವಯತ್ರಿ. ಸಂಚಿಯ ಹೊನ್ನಮ್ಮ: ಇವರು ಕನ್ನಡ ಸಾಹಿತ್ಯದ ಮಹಿಳಾ ಕವಯತ್ರಿಯರಲ್ಲಿ ಒಬ್ಬರು ಮತ್ತು ಮೈಸೂರು ಒಡೆಯರ್ ರಾಜವಂಶದ ಆಸ್ಥಾನದಲ್ಲಿದ್ದರು (17ನೇ ಶತಮಾನ). ಅವರ ಕವಿತೆಗಳು ಸ್ತ್ರೀಯರ ಜೀವನಾನುಭವ ಮತ್ತು ಸಮಾನತೆಯ ಬಗ್ಗೆ ಮಾರ್ಗದರ್ಶನ ನೀಡುತ್ತವೆ.

**ಹೆಳವನಕಟ್ಟೆ ಗಿರಿಯಮ್ಮ:** ಇವರು ಹೆಳವನಕಟ್ಟೆ ರಂಗನಾಥನ ಪರಮ ಭಕ್ತೆಯಾಗಿದ್ದ ಬ್ರಾಹ್ಮಣ ಕವಯತ್ರಿ. ಸೀತಾ ಕಲ್ಯಾಣ, ಚಂದ್ರಹಾಸ ಮತ್ತು ಉದ್ದಾಲಕನ ಕಥೆಗಳಂತಹ ಜನಪ್ರಿಯ ವಿಷಯಗಳ ಕುರಿತು ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಈ ಕವಯತ್ರಿಯರು ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಮತ್ತು ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಅಮೂಲ್ಯ

ಕೊಡುಗೆಗಳನ್ನು ನೀಡಿದ್ದಾರೆ.

**ಕರ್ನಾಟಕದಲ್ಲಿ ಜೈನಧರ್ಮ:** ಜೈನಧರ್ಮ ಯಾವಾಗ ದಕ್ಷಿಣ ಭಾರತಕ್ಕೆ ಅದರಲ್ಲೂ ಕರ್ನಾಟಕದತ್ತ ಪ್ರವೇಶವಾಯಿತು ಎಂದು ಗುರುತಿಸುವುದು ಕಷ್ಟ ಸಾಧ್ಯವಾದರೂ 'ಭದ್ರಬಾಹು' ಮತ್ತು 'ಚಂದ್ರಗುಪ್ತ'ರು ಉತ್ತರದಿಂದ ದಕ್ಷಿಣದ ಕಳ್ಬಪುನಾಡಿಗೆ (ಶ್ರವಣಬೆಳಗೊಳ) ಬಂದ ವೃತ್ತಾಂತದಿಂದ ಬಲವಾಗಿ ಗುರುತಿಸುವ ಪ್ರಯತ್ನವನ್ನು ವಿದ್ವಾಂಸರುಗಳು ಮಾಡಿದ್ದಾರೆ. ಈ ಚಾರಿತ್ರಿಕ ಘಟನೆಯನ್ನು ಕ್ರಿ.ಶ. 10ನೇ ಶತಮಾನದಲ್ಲಿ ರಚನೆಗೊಂಡ ವಡ್ಡಾರಾಧನೆ ಗ್ರಂಥ ತಿಳಿಸುವಂತೆ ಭದ್ರಬಾಹು ಭಟ್ಟಾರಕರು ಉಜ್ಜಯಿನಿಯಲ್ಲಿದ್ದಾಗ ಉತ್ತರದೇಶದಲ್ಲಿ 12 ವರ್ಷಗಳ ಕಾಲ ಭೀಕರ ಕ್ಷಾಮ ಉಂಟಾಗುವುದೆಂದು ಅರಿತು ಅವರು ತಮ್ಮ ಶಿಷ್ಯ ಚಂದ್ರಗುಪ್ತನೊಂದಿಗೆ ಬಂದು ಶ್ರವಣಬೆಳಗೊಳದಲ್ಲಿಯೇ ಉಳಿಯುತ್ತಾರೆ. ಆದರೆ ಅವರ ಶಿಷ್ಯರಲ್ಲಿ ಪ್ರಮುಖರಾದ ವಿಶಾಖಾಚಾರ್ಯರ ನೇತೃತ್ವದಲ್ಲಿ ಸುಹಸ್ತಿ, ಅರಭದ್ರರು, ಸುಭದ್ರ, ಮಹಾಗಿರಿ, ಸಮತಿ, ಮಹಾಸತಿ ಮೊದಲಾದ ಶಿಷ್ಯ ಸಮುದಾಯವು ದ್ರವಿಳ (ತಮಿಳುನಾಡು) ದೇಶಕ್ಕೆ ಕಳುಹಿಸಿಕೊಡುತ್ತಾರೆ. ಶ್ರವಣಬೆಳಗೊಳದಲ್ಲಿಯೇ ಉಳಿದ ಭದ್ರಬಾಹು ಹಾಗೂ ಚಂದ್ರಗುಪ್ತರು ಸಲ್ಲೇಖನ ವ್ರತದಿಂದ ಸಮಾಧಿಮರಣ ಹೊಂದಿದರು. ಜೈನ ಪರಂಪರೆಯ ಕೃತಿಗಳಾದ ಹರಿಷೇಣನ ಸಂಸ್ಕೃತದ 'ಬೃಹತ್ಕಥಾ ಕೋಶ', ರತ್ನನಂದಿಯ 'ಭದ್ರಬಾಹು ಚರಿತೆ', ದೇವೇಂದ್ರನ 'ರಾಜಾವಳಿ ಕಥೆ' ಮತ್ತು ಪ್ರಾಚೀನ ಪ್ರಾಕೃತ ಗ್ರಂಥ 'ತಿಲೋಯ ಪಣ್ಣತ್ತಿ' ಮೊದಲಾದ ಗ್ರಂಥಗಳಲ್ಲಿ ವಿವರಣೆಯು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಇದೇ ಉಲ್ಲೇಖ ಕಂಡುಬರುತ್ತದೆ.

ಜೈನ ಪರಂಪರೆಯ ಈ ವಿವರ ಕ್ರಿ.ಶ. 600ರ ಶ್ರವಣಬೆಳಗೊಳದ ಚಿಕ್ಕಬೆಟ್ಟ ಶಾಸನ ಮತ್ತು ಅಲ್ಲಿನ ಒಂದು ಬೆಟ್ಟಕ್ಕೆ ಚಂದ್ರಗಿರಿ ಎಂಬ ಹೆಸರಿದ್ದು ಅಲ್ಲಿನ ಚಂದ್ರಗುಪ್ತ ಬಸದಿ, ಭದ್ರಬಾಹು ಗುಹೆ ಮತ್ತು ಪಾದಚಿಹ್ನೆಗಳು ಮೇಲಿನ ವಿವರಣೆಯು ಐತಿಹಾಸಿಕ ಸತ್ಯವೆಂದು ಸಮರ್ಥಿಸುತ್ತವೆ. ಭದ್ರಬಾಹು ಮತ್ತು ಚಂದ್ರಗುಪ್ತರ ಈ ಮೇಲಿನ ಉಲ್ಲೇಖದ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ, ಈಗಲೂ ನಡೆಯುತ್ತಿವೆ. ಕರ್ನಾಟಕಕ್ಕೆ ಜೈನಧರ್ಮದ ಆಗಮನಕ್ಕೆ ವಿಭಿನ್ನವಾದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಭದ್ರಬಾಹು ಮತ್ತು ಚಂದ್ರಗುಪ್ತರು ದಕ್ಷಿಣಕ್ಕೆ ಬರುವ ಪೂರ್ವದಲ್ಲಿಯೇ ಕರ್ನಾಟಕದಲ್ಲಿ ಜೈನಧರ್ಮವಿದ್ದೀತೆಂದು ವಾದಿಸುತ್ತಾರೆ. ಆದರೆ ಇದನ್ನು ಒಪ್ಪಿಕೊಳ್ಳಲು ಇನ್ನಷ್ಟು ಮೂಲಾಧಾರಗಳು ದೊರೆಯಬೇಕಾಗುತ್ತವೆ.

**ಕಿತ್ತೂರು ಸಂಸ್ಥಾನದ ಕನ್ನಡ ದಾಖಲೆಗಳು:** ಎಂಬ ವಿಷಯವನ್ನು ಕುರಿತು ಚರ್ಚಿಸುವ ಸಂದರ್ಭದಲ್ಲಿ ಈ ಕುರಿತು ಡಾ. ಅನ್ನಪೂರ್ಣ ಹತ್ತಿಮತ್ತೂರ ಅವರು 2002ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ 'ಕಿತ್ತೂರು ಸಂಸ್ಥಾನದ ಸಾಹಿತ್ಯ' ಎಂಬ ಪ್ರಬಂಧದಲ್ಲಿ– ಜಾನಪದ ಸಾಹಿತ್ಯದಲ್ಲಿ ಕಿತ್ತೂರು ಎಂಬುವುದರಲ್ಲಿ– ಮಲ್ಲಸರ್ಜನನ ಕಾವ್ಯ, ದುಂದುಬಿ ಹಾಡುಗಳು, ಸೋಬಾನ ಪದಗಳು, ಲಾವಣಿ ಸಾಹಿತ್ಯದಲ್ಲಿ, ಕೋಲು ಪದಗಳಲ್ಲಿ ಕಿತ್ತೂರು ಕುರಿತ ವಿಷಯವನ್ನು ಸಂಗ್ರಹಿಸಿದ್ದಾರೆ. ಅವರು ಮುಂದುವರೆದು ಕಿತ್ತೂರು ಸಂಸ್ಥಾನದ ಶಿಷ್ಟ ಸಾಹಿತ್ಯ ಎಂಬುವುದರಲ್ಲಿ ಮುನಿಪುರಿಯದ ನೀಲಕಂಠಾರ್ಯ ರಚಿಸಿದ ಐದು ಕಾವ್ಯಗಳು ಮತ್ತು ಕಾಶಿರಾಜ ರಚಿಸಿದ ಒಂದು ಕಾವ್ಯವನ್ನು ಪರಿಚಯಿಸುತ್ತಾರೆ. ಇವುಗಳಲ್ಲಿ ಮಲ್ಲೇಂದ್ರ ವಿಜಯ, ಮಲ್ಲೇಂದ್ರ ಪೂಜಾ ವಿಲಾಸ, ಮಲ್ಲೇಂದ್ರ ಪೂಜಾ ವಿಲಾಸ ತಾರಾವಳಿ, ಗಣೇಶೋತ್ಸವ ಮಲ್ಲೇಂದ್ರ ಭಕ್ತಿ ತರಂಗಿಣಿ ಮಲ್ಲೇಂದ್ರ ಮಾನಸೋಲ್ಲಾಸ. ಮುನಿಪುರದ ನೀಲಕಂಠನು ಬೈಲಹೊಂಗಲ ತಾಲೂಕಿನ ಖಾದರ್‌ಹಳ್ಳಿ ಗ್ರಾಮದ ರುದ್ರಪ್ಪ ಮತ್ತು ತುಳಸಮ್ಮರ ಪುತ್ರನಾಗಿ ಜನಿಸಿದ್ದನು. ಇವನು ಕಿತ್ತೂರು ಸಂಸ್ಥಾನದಲ್ಲಿ ಆಸ್ಥಾನ

ಕವಿಯಾಗಿದ್ದವನು. ಕಾಶಿರಾಜನು ಅಣ್ಣಿಗೇರಿಯ ಅಮೃತೇಶನ ಭಕ್ತನಾಗಿದ್ದು ಇವನಿಂದ ರಚಿತವಾದ ಪದಗಳಲ್ಲಿ ರಾಗ ನಿರ್ದೇಶನವಿದ್ದು ಪ್ರಧಾನವಾಗಿ ಮಲ್ಲೇಂದ್ರನನ್ನು ಕುರಿತು ಶೃಂಗಾರ ನಿಷ್ಠ ಪದಗಳಿವೆ. ಕಿತ್ತೂರು ಸಂಸ್ಥಾನದ ಪ್ರಕಟಿತ ಸಾಹಿತ್ಯದಲ್ಲಿ ಮುನಿಪುರದ ಸಿದ್ದೇಶ ಅಂಕಿತದ ಪದಗಳು, ಮುಚಖಂಡಿಯ ವೀರ ಅಂಕಿತದ ಪದಗಳು ಇವೆ. ಇನ್ನೂ ಅನೇಕ ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ದೊರೆ ಮಲ್ಲಸರ್ಜನನನ್ನು ಕುರಿತು ಹೆಚ್ಚಿನ ವಿವರಗಳು ನಮಗೆ ಸಿಗುತ್ತವೆ. ಆದರೆ ಇವುಗಳನ್ನು ಉಪಯೋಗಿಸಿಕೊಳ್ಳುವ ಸಂದರ್ಭದಲ್ಲಿ ಹೆಚ್ಚು ಎಚ್ಚರಿಕೆಯಿಂದ ಇರಬೇಕಾದದ್ದು ಆವಶ್ಯಕತೆ. ಒಂದು ಕಡೆ ಕಿತ್ತೂರನ್ನು ಕುರಿತು ಜನಪದೀಯರು ಹೆಚ್ಚು ವಸ್ತುನಿಷ್ಠವಾಗಿ ರಚಿಸಿದ್ದರೆ, ಇಂಗ್ಲಿಷರು ತಮ್ಮದೇ ಆದ ಶೈಲಿಯಲ್ಲಿ ರಚಿಸಿದ್ದಾರೆ. ಹೀಗಾಗಿ ಅವರು ಬರೆದಿರುವ ಪತ್ರ ವ್ಯವಹಾರಗಳು ದಾಖಲೆಗಳು ನಮಗೆ ಉಪಯುಕ್ತವಾದ ಮಾಹಿತಿಯನ್ನು ನೀಡಿದ್ದರೂ, ಎರಡನ್ನೂ ತೌಲನಿಕವಾಗಿ ಅಧ್ಯಯನ ಕೈಗೊಂಡು ಕಿತ್ತೂರಿನ ಸ್ಪಷ್ಟವಾದ, ನಿಜವಾದ ಇತಿಹಾಸವನ್ನು ಹೊರತರಬೇಕಾಗಿರುವುದು ಇಂದಿನ ಆವಶ್ಯಕತೆಗಳಲ್ಲಿ ಒಂದಾಗಿದೆ.

**ಇಮ್ಮಡಿ ಪುಲಿಕೇಶಿ ಮತ್ತು ಅರಬ್ಬ ಸಂಬಂಧ:** ಪ್ರಾಚೀನ ಕರ್ನಾಟಕವು ಪ್ರಪಂಚದ ಅನೇಕ ದೇಶಗಳೊಡನೆ ಸಾಂಸ್ಕೃತಿಕ, ವ್ಯಾಪಾರಿಕ ಮತ್ತು ರಾಜಕೀಯವಾದ ಸಂಬಂಧಗಳನ್ನು ಪಡೆದಿತ್ತು. ಅದರಲ್ಲಿ ಅರಬ್ಬರು ಪ್ರಮುಖರು. ಅರಬ್ಬರು ಕರ್ನಾಟಕದೊಂದಿಗೆ ಬಹಳ ಪ್ರಾಚೀನ ಕಾಲದಿಂದಲೂ ಸಂಬಂಧಗಳನ್ನು ಬೆಳೆಸಿಕೊಂಡಿದ್ದರು. ಬಾದಾಮಿಯ ಚಾಲುಕ್ಯ ಎರಡನೇ ಪುಲಿಕೇಶಿಯು ಅರಬ್ ನಾಡಿನ ಇರಾನ್ ದೇಶದ ಎರಡನೆಯ ಖುಸ್ರುವಿನೊಂದಿಗೆ ಪತ್ರ ವ್ಯವಹಾರವನ್ನು ನಡೆಸಿದ್ದರಿಂದ ತನ್ನ ರಾಯಭಾರಿಯನ್ನು ಕಳುಹಿಸಿದನೆಂದು ತಬರಿ ಎಂಬ ಅರಬ್ ದೇಶದ ಇತಿಹಾಸಕಾರನ ಬರವಣಿಗೆಯಿಂದ ತಿಳಿದು ಬರುತ್ತದೆ.

**ಶ್ರೀ ಮಹಿಪತಿದಾಸರು:** ಶ್ರೀ ಮಹಿಪತಿದಾಸರು ಆದಿಲಶಾಹಿ ಆಸ್ಥಾನದಲ್ಲಿ ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಮೂಲತಃ ಶ್ರೀಕ್ಷೇತ್ರ ಕಾಖಂಡಕಿಯವರು. ಇವರು ಕನ್ನಡ, ಸಂಸ್ಕೃತ, ಮರಾಠಿ ಮತ್ತು ಉರ್ದು ನಾಲ್ಕು ಭಾಷೆಗಳಲ್ಲಿ ಪರಿಣಿತಿಯನ್ನು ಹೊಂದಿದ್ದರು. "ಮುತ್ತು ಕೊಳ್ಳಿರೋ ಉತ್ತಮರೆಲ್ಲ ಮುತ್ತು ಕೊಳ್ಳಿರೊ", "ಸ್ಮರಿಸೊ ಮನವೆ ಶ್ರೀಹರಿಯ ಸ್ಮರಿಸು ಮನವೆ", "ಸಕಲವೆನಗೆ ನೀನೇ ಶ್ರೀಹರಿಯೆ" ಮುಂತಾದ ಅನೇಕ ಕೀರ್ತನೆಗಳನ್ನು ಬರೆದಿದ್ದಾರೆ. ಇವರು ಒಬ್ಬ ಮುಸ್ಲಿಂ ಮೌಲ್ವಿಯಾದ 'ಶಾನುಂಗ' ಎಂಬುವರ ಸಂಪರ್ಕದಿಂದಾಗಿ ವೈರಾಗ್ಯ ಉಂಟಾಗಿ ಆದಿಲಶಾಹಿ ಆಸ್ಥಾನವನ್ನು ತೊರೆದು ಸಾರವಾಡಕ್ಕೆ ಹೋದರು. ಅಲ್ಲಿಂದ 'ಸಕಲವೆನಗೆ ನೀನೇ ಶ್ರೀಹರಿ' ಎಂದು ಲೋಕಸಂಚಾರ ಕೈಗೊಂಡು ಕೊನೆಗೆ ಕಾಖಂಡಕಿಯನ್ನು ತಮ್ಮ ಪುಣ್ಯಕ್ಷೇತ್ರ ಮಾಡಿಕೊಂಡು ಅಲ್ಲಿಯೇ ಶ್ರೀಹರಿಯ ಪಾದ ಸೇರಿದರು.

**ದೇಸಾಯಿ ಮನೆತನದವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು:**

ದೇಸಾಯಿ ಮನೆತನದವರು ತಾವೇ ಸ್ವತಃ ಸಾಹಿತಿಗಳಾಗಿರುವುದಲ್ಲದೇ ಕವಿಗಳಿಗೆ ಪಂಡಿತರುಗಳಿಗೆ ಸಹಾಯ ಹಸ್ತವನ್ನು ಚಾಚುವುದರ ಮೂಲಕ ಸಾಹಿತ್ಯ ಕ್ಷೇತ್ರವು ಸಮೃದ್ಧವಾಗಿ ಬೆಳೆಯುವುದಕ್ಕೂ ಕಾರಣಪುರುಷರಾಗಿದ್ದಾರೆ. ಕೊಲ್ಹಾರ ದೇಸಗತಿ ಮನೆತನದಲ್ಲಿ ಅದೃಶ್ಯ ಕವಿಯು ಪ್ರಮುಖನಾಗಿದ್ದಾನೆ. ಕ್ರಿ.ಶ. 1530 ರ ಸುಮಾರಿಗೆ ಜನಿಸಿ ಬೆಳ್ಳುಬ್ಬಿಯ ಮಳೆಯ ಮಲ್ಲೇಶನನ್ನು ಗುರುವಾಗಿ ಸ್ವೀಕರಿಸಿದ ಇವನು ವೀರಶೈವ ಧರ್ಮದ ಆಚಾರ, ವಿಚಾರ, ಧರ್ಮ ತತ್ವಗಳನ್ನು ಚೆನ್ನಾಗಿ ಅರಿತು ದೇಸಗತಿಯತ್ತ ಮನಸ್ಸು ಮಾಡದೇ ಸಾಹಿತ್ಯದತ್ತ

ವಾಲಿದ್ದು ತೀರಾ ಸಹಜ. ತನ್ನ ಮನೆತನಕ್ಕೆ ದೇಸಗತಿಯನ್ನು ದಯಪಾಲಿಸಿದ ದೊರೆ ಪ್ರೌಢ ದೇವರಾಯನ ಉಪಕಾರ ಸ್ಮರಣೆಗಾಗಿ 'ಪ್ರೌಢರಾಯನ' ಕಾವ್ಯವನ್ನು ರಚಿಸಿದನು. ಇದು ಅಲ್ಲದೆ ಅವನು 'ಮುಗ್ಧ ಸಂಗಾರ್ಯ ಪುರಾಣ' ಮತ್ತು 'ಮಳೆಯ ಮಲ್ಲೇಶ' ಪುರಾಣಗಳನ್ನು ಬರೆದನೆಂದು ಪ್ರತೀತಿ. ಆದರೆ ಈ ಎರಡೂ ಕೃತಿಗಳು ಲಭ್ಯವಾಗಿಲ್ಲ. ಶಿರಸಂಗಿಯ ಎರಡನೆಯ ಜಾಯಗೊಂಡ ದೇಸಾಯಿಯವರು ಸಾಹಿತ್ಯ ಪ್ರೇಮಿಗಳಾಗಿದ್ದು ಅಲ್ಲದೇ ಕವಿಗಳಿಗೆ ಆಶ್ರಯದಾತರಾಗಿದ್ದರು. ಅವರು ಸ್ವತಃ ಕವಿಯಾಗಿದ್ದು ಅಪ್ಪಯ್ಯ ದೀಕ್ಷಿತರ ಸಂಸ್ಕೃತ 'ಕುವಲಯಾನಂದ ಅಲಂಕಾರ ಶಾಸ್ತ್ರ' ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿದರು. ಅಲ್ಲದೆ 'ಶೃಂಗಾರ ತಿಲಕ ಅಥವಾ ರಸಮಂಜರಿ' ಎಂಬ ನವರಸಗಳ ವಿವರಣೆ ನೀಡುವ ಕೃತಿಯನ್ನು ರಚಿಸಿದರು. ಇದು ಭಾನುದತ್ತನ 'ರಸಮಂಜರಿ'ಯ ಕನ್ನಡ ಅನುವಾದ ಗ್ರಂಥ.

ಅಗರಖೇಡದ ಜಹಗೀರದಾರರಲ್ಲಿ ಶ್ರೀ ಅಧ್ಯಾ ರಂಗಾಚಾರ್ಯರು (ಶ್ರೀರಂಗ) ಹೆಸರು ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖವಾದುದು. 1904 ರಲ್ಲಿ ಜನಿಸಿದ ಇವರು ಇಂಗ್ಲೆಂಡಿನಲ್ಲಿ ಉನ್ನತ ವ್ಯಾಸಂಗವನ್ನು ಮಾಡಿ ಬಂದ ನಂತರ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಅನಂತರ ರಾಯಚೂರಿನಲ್ಲಿ 1955 ರಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು. ಇವರು 47 ನಾಟಕಗಳನ್ನು, 29 ಏಕಾಂಕ ನಾಟಕಗಳನ್ನು, 1 ಕಾವ್ಯ, 13 ಕಾದಂಬರಿಗಳು, 4 ಚರಿತ್ರೆ ಮತ್ತು ಆತ್ಮ ಚರಿತ್ರೆಗಳನ್ನು, 15 ಮೀಮಾಂಸೆಗಳು, 5 ನಾಟ್ಯ ವಿಮರ್ಶೆ, 8 ವೈಚಾರಿಕ ಪ್ರಬಂಧಗಳು, 2 ಪ್ರವಾಸ ಕಥನಗಳನ್ನು, 8 ಅನುವಾದಿತ ಆಂಗ್ಲ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ರುದ್ರಾಪುರದ ದೇಸಗತಿಯ ಶಿವಲಿಂಗಪ್ರಭುಗಳು ತಮ್ಮ ಆತ್ಮಚರಿತ್ರೆ "ಹೃದಯಲಿಖಿತ" ಎಂಬುವುದನ್ನು 22 ಸಂಪುಟಗಳಲ್ಲಿ ರಚಿಸಿದ್ದಾರೆ. ಇದರಲ್ಲಿ 1933 ರಿಂದ 1966 ರವರೆಗಿನ ತಮ್ಮ ಜೀವನದ ಎಲ್ಲಾ ಘಟನೆಗಳನ್ನು ಬರೆದಿದ್ದಾರೆ. ಅಲ್ಲದೆ 'ಕಪ್ಪು ಮುಡಿಗೆ ಸಂಭೋದನೆಯ ಪುನೀತಗಳು' 52 ಕವನಗಳನ್ನು ಒಳಗೊಂಡಿದೆ. 'ಕವಿಯ ರೆಕ್ಕೆಗಳು' ರೂಪರೇಶದ 129 ಕವನಗಳನ್ನು ಒಳಗೊಂಡ ಕವನ ಸಂಕಲನವಾಗಿದೆ. 'ಬಿಡಿಗೊಂಚಲು' ಇದರಲ್ಲಿ ಹಿರಿಯ ಲೇಖಕರನ್ನು ಕುರಿತ ಕವನಗಳಿವೆ.

ಆಲಮೇಲದ ಶಿವಲಿಂಗರಾವ್ ದೇಶಮುಖರು ತಮ್ಮ ಸುಧೀರ್ಘ 80 ವರ್ಷದ ಜೀವನದ ಅನುಭವಗಳನ್ನು ಕುರಿತು "Recollections and Reflections an Autobiography" (1961) ಎಂದು ತಮ್ಮ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಇದನ್ನು ಸಿದ್ದಲಿಂಗ ದೇಸಾಯಿಯವರು 'ಆಲಮೇಲ ಶಿವಲಿಂಗರಾವ್ ದೇಶಮುಖರು' (ಆತ್ಮಕಥನ) ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಚಚಡಿಯ ವೀರಭದ್ರ ದೇಸಾಯಿಯವರ ಪತ್ನಿ ರುದ್ರಮ್ಮನು ವಿದ್ಯಾವಂತೆಯಾಗಿದ್ದು ಅವರು 'ರಸಪಾಕ ವಿಧಾನ' ಎಂಬ ವಿವಿಧ ಬಗೆಯ ಅಡಿಗೆ ಮಾಡುವ ವಿಧಾನವನ್ನು ಕುರಿತು ಗ್ರಂಥವನ್ನು ರಚಿಸಿದ್ದಾರೆ. ಇದನ್ನು ಬೆಳಗಾವಿಯ ಅಕ್ಕನ ಬಳಗದವರು ಪ್ರಕಟಿಸಿದ್ದಾರೆ. ಶಿರಸಂಗಿಯ ಮಲ್ಲಸರ್ಜ ಸಾಹಿತ್ಯ, ನಾಟಕ, ನೃತ್ಯ, ಹಾಡು, ಬೈಲಾಟ ಮುಂತಾದ ಕಲೆಗಳಲ್ಲಿ ಬಹಳ ಆಸಕ್ತಿ ಹೊಂದಿದವನಾಗಿದ್ದು ಆತನು ಸಾಹಿತಿಗಳಿಗೆ, ಕವಿಗಳಿಗೆ ವಿಶೇಷ ಪ್ರೋತ್ಸಾಹವನ್ನು ಕೊಡುತ್ತಿದ್ದನು. ಆತನ ದರ್ಬಾರದಲ್ಲಿ ಕವಿಗಳೂ, ನಾಟಕಕಾರರೂ, ಸಾಹಿತಿಗಳೂ ಆಶ್ರಯ ಪಡೆದುಕೊಂಡಿದ್ದರು. ಇಂಥವರಲ್ಲಿ ಕೊಲಸಿ ರಂಗಾಚಾರ್ಯರೆಂಬ ನಯ್ಯಾಯಕ ತತ್ವಜ್ಞಾನದಲ್ಲಿ ಪರಿಣಿತರಾದ ಪಂಡಿತರು, ವೆಂಗಿ ಚೆನ್ನಬಸಪ್ಪ, ಮುಳಗುಂದ ಜವಳಿ ಶೆಟ್ಟರ ಚನ್ನಬಸಪ್ಪ, ಕಾಶಿ ರಾಮವರ ರುದ್ರಕವಿ, ಮಣಿಪುರದ ನೀಲಕಂಠಾಚಾರ್ಯ, ಮಾಗುಂಡಿ ಬಸವ, ಶಿವಲಿಂಗಶಾಸ್ತ್ರಿ, ದೇವರ ಶೀಗಿಹಳ್ಳಿ

ರುದ್ರಗೌಡ, ಬೆಟಗೇರಿ ಶಿವಲಿಂಗಶಾಸ್ತ್ರಿ ಮುಂತಾದ ಕವಿಗಳೂ, 'ಮನೇಂದ್ರ ಮಾನಸೋಲ್ಲಾಸ' ಅಥವಾ 'ಮಲ್ಲತರಂಗಿಣಿ' ಎಂಬ ಮಲ್ಲಸರ್ಜನ ಬಗ್ಗೆ ಬರೆದ ಖಂಡ ಕಾವ್ಯವನ್ನು ರಚಿಸಿದ ಅಮೃತೇಶ್ವರ ಇವರು ಪ್ರಮುಖರು.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಜಾಲಿಹಾಳ ದೇಸಗತಿ ಮನೆತನಕ್ಕೆ ಸೇರಿದ ಮುರಹರಿನಾಯಕನು ಶ್ರೇಷ್ಠ ನಾಟಕಕಾರನಾಗಿದ್ದನು. ಇವನು ಬರೆದ 10 ನಾಟಕಗಳಿದ್ದು ಅವು ಸಂಸ್ಕೃತ, ಮರಾಠಿ ಹಾಗೂ ಆಂಗ್ಲ ಭಾಷೆಯನ್ನು ಸೇರಿಸಿ ಬರೆದುದಾಗಿವೆ. ನಾಟಕಗಳಲ್ಲಿ 'ಬಸವಿಯ ಬಾಳು', 'ಸವತಿಯ ಶಾಪ', 'ವಿಧವೆಯ ವಿಧಿ ಕೈವಾಡ', ಮಯೂರ ಧ್ವಜ (ದೊಡ್ಡಾಟ), 'ಅಪರಾಧಿ ಯಾರು' ಮುಂತಾದವುಗಳಾಗಿವೆ. ಒಟ್ಟಾರೆ ಕವಿ ಮುರಹರಿನಾಯಕರು ಮುಚ್ಚು ಮರೆಯಿಲ್ಲದೆ ಪ್ರಗತಿಗಾಮಿ ಹಾಗೂ ಬಂಡಾಯದ ಧೋರಣೆಗಳನ್ನು ಅಳವಡಿಸಿಕೊಂಡು, ಜಮೀನದಾರಿ ವ್ಯವಸ್ಥೆಯಿಂದ ದೂರನಿಂತು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಿನ್ನೆಲೆಯ ಬದುಕಿನಲ್ಲಿ ನಡೆದ ದುಷ್ಪರಿಣಾಮಗಳನ್ನು ಬಿಚ್ಚಿರುವ ಉದ್ದೇಶ ಇವರ ಸಾಹಿತ್ಯದ ಮುಖ್ಯ ಆಶಯವಾಗಿರುವುದು ಇದರಿಂದ ತಿಳಿದು ಬರುತ್ತದೆ. ಗದಗ ಜಿಲ್ಲೆಯ ಕಲಕೇರಿಯ ಏಳನೆಯ ಮಲ್ಲಪ್ಪ ದೇಸಾಯಿಯು ಸಾಹಿತ್ಯಾಸಕ್ತರಾಗಿದ್ದರು. ಅವರು ಅಂದಿನ ಲಾವಣಿಕಾರರಾಗಿದ್ದ ಅಂದಾನಪ್ಪ ಹೊಟ್ಟಿ ಮತ್ತು ಫೀರಸಾಬ ಎಂಬುವರಿಗೆ ಆಶ್ರಯ ನೀಡಿ 'ಸಂಗೊಳ್ಳಿ ರಾಯಣ್ಣ' ಮತ್ತು 'ಹಮ್ಮಿಗಿ ಕೆಂಚನಗೌಡರ' ಕುರಿತು ಹೋರಾಟದ ಲಾವಣಿಗಳು ರಚನೆಯಾಗುವಂತೆ ನೋಡಿಕೊಂಡರು.

ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆಯಲ್ಲಿ ಬಿ.ಎಂ.ಶ್ರೀ, ಬೇಂದ್ರೆ ಹಾಗೂ ಕುವೆಂಪು ಅವರ ಪದ್ಯಗಳು ಬಿ.ಎಂ.ಶ್ರೀ ಅವರಿಗೆ ಭಾರತವೂ ತಾಯಿಯಾಗಿದ್ದಾಳೆ. ಬ್ರಿಟಿಷರ ದಾಸ್ಯಕ್ಕೆ ಒಳಗಾದ ಭಾರತವು ಬಿಡುಗಡೆ ಹೊಂದಿ ತನ್ನ ಸ್ವಾಭಿಮಾನದ ಶ್ರೀಮಂತಿಕೆಯಿಂದ ತಲೆಯೆತ್ತಿ ಮೆರೆಯಬೇಕೆಂದು ಭಾವಿಸಿದ್ದಾರೆ. ಭಾರತ ಮಾತೆಯೇ, ಭರತ ಮಾತೆಯೇ ಎಂದು ನೀ ತಲೆ ಎತ್ತುವೆ? ಎಂದು ಲೋಕದ ಜನರ ಹೃದಯದಿ ನಿನ್ನ ಮಹಿಮೆ ಬಿತ್ತುವೆ. ಎಂದು ಮಲೀನತೆ ನೀಡುವೆ – ಮಗುಳೆಂದು ನಗು ಮುಖವಾಗುವೆ. ಎಂಬಲ್ಲಿ ಬಿ.ಎಂ.ಶ್ರೀ ಅವರು ಭರತ ಮಾತೆಯು ದಾಸ್ಯದ ಸಂಕೋಲೆಗಳಲ್ಲಿರುವುದನ್ನ ಗಮನಿಸಿದ್ದಾರೆ. ಬೇಂದ್ರೆ ಅವರ ಇನ್ನೊಂದು ಕವಿತೆಯಾದ 'ನನ್ನದು–ಈ ಕನ್ನಡ ನಾಡು'ವಿನಲ್ಲಿ ಕನ್ನಡ ನಾಡು, ಈ ನಾಡಿನಲ್ಲಿರುವ ಜೈನ, ವೀರಶೈವ, ವೈದಿಕ ಮತ ಪಂಥಗಳು ಮತ್ತು ನಾಡಿನಲ್ಲಿ ರಚಿಸಲ್ಪಟ್ಟ ಎಲ್ಲಾ ಸಾಹಿತ್ಯವೂ ನನ್ನದು ಎಂದು ಕವಿಗಳು ಹೆಮ್ಮೆಯಿಂದ ಸಾರಿ ಹೇಳಿದ್ದಾರೆ. "ನನ್ನದು ಈ ಕನ್ನಡ ನಾಡು ನನ್ನದೋ! ಅವರಿವರದೆಂದು ಎಂದೂ ನನ್ನದೋ! ಅದು ನನ್ನದೆಂತು ಹಾಗೆ ನಿನ್ನದೋ! ನನ್ನದು ಈ ಕನ್ನಡ ನಾಡು, ಈ ಕನ್ನಡ ನಾಡು" ಎಂದು ಹೇಳುತ್ತಾರೆ. ಮುಂದುವರಿದು, 'ಶೂನ್ಯ' ಎಂಬ ಕವಿತೆಯಲ್ಲಿ ಬೇಂದ್ರೆ ಅಂದಿನ ದುಂಡು ಮೇಜಿನ ಸಭೆಯ ಸಂಗತಿಗಳನ್ನು ವಿಡಂಭನಾತ್ಮಕವಾಗಿ ಚಿತ್ರಿಸಿರುವುದನ್ನು ಹೀಗೆ ನೋಡಬಹುದು. "ದುಂಡು ಮೇಜಿನ ಸುತ್ತ। ದುಂಡು ದುಂಡು ಮಂದಿ। ದುಂಡು ದುಂಡು ಮಂದಿಗೆ ಬಂಡೀಗಾಲೀ ಹೊಟ್ಟೆ। ಬಂಡೀಗಾಲೀ ಹೊಟ್ಟೆಗೆ ಗುಂಡು ಕಲ್ಲಿ ತಲೆಯು, ಗುಂಡು ಕಲ್ಲಿ ತಲೆಗೆ, ಸೊನ್ನೆ ಸುತ್ತಿದ ಮಿದುಳು, ಸೊನ್ನೆ ಸುತ್ತಿದ ಮಿದುಳಿಗೆ ಪೂಜೆ, ಪೂಜೆ ಫಲವು, ಪೂಜೆ, ಪೂಜೆ ಫಲದೊಳಗೆ ಚಕ್ರಗೋಷ್ಠಿ ಗೊರಟ। ಚಕ್ರಗೋಷ್ಠಿ ಗೊರಟಕ್ಕೆ ವಕ್ರ ಶನಿ ನೋಟ, ಬೆಳ್ಳನ್ನವರಿಗಾಟ ಕಪ್ಪನ್ನಾವರಿಗೆ ಕಾಟ" ಎಂದು ಇಲ್ಲಿ ಬೇಂದ್ರೆಯವರು ದುಂಡು ಮೇಜಿನ ಸುತ್ತ ದುಂಡು ದುಂಡು ಮಂದಿ ಎನ್ನುವ ಮೂಲಕವೇ ದುಂಡು ಮೇಜಿನ ಸಭೆಯ ನಡಿಗೆಯನ್ನು, ನಡಾವಳಿಕೆಯನ್ನು ವಿಡಂಬಿಸಿದ್ದಾರೆ.

ಕುವೆಂಪು ಅವರು 'ಪಾಂಚಜನ್ಯದ' ಮೂಲಕ ಹೀಗೆ ಮೊಳಗಿಸಿದರು. "ನಡೆ

ಮುಂದೆ, ನಡೆ ಮುಂದೆ ನುಗ್ಗಿ ನಡೆ ಮುಂದೆ! ಜಗ್ಗದೆಯೇ, ಕುಗ್ಗದೆಯೆ, ಹಿಗ್ಗಿ ನಡೆ ಮುಂದೆ! ಬೆಚ್ಚಿ ಬಿಡು, ನೆಚ್ಚ ನೆಡು ಕೆಚ್ಚೆದೆಯ ಗುಡಿಯಲ್ಲಿ, ಸೆರೆಯ ಹರಿ, ಅರಿಯೆನಿರಿ, ಹುಟ್ಟುಳಿಸು ಹುಡಿಯಲ್ಲಿ! ನಾನಳಿವೆ, ನೀನಳಿವೆ, ನಮ್ಮೆಲುಬುಗಳ ಮೇಲೆ ಮೂಡುವುದು, ಮೂಡುವುದು ನವಭಾರತದ ಲೀಲೆ!" ಎಂದು ಸ್ವಾತಂತ್ರ್ಯ ಹೋರಾಟಕ್ಕೆ ನಿಲ್ಲದೇ ಸಾಗಿ ಎಂದು ಕನ್ನಡಿಗರನ್ನು ಎಚ್ಚರಿಸಿದ ರೀತಿಯನ್ನು ಕಾಣಬಹುದು. ಇಂತಹ ಅನೇಕ ಕವಿಗಳು ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಹೋರಾಟಕ್ಕೆ ತಮ್ಮ ಕವನ ಕಾವ್ಯಗಳ ಮೂಲಕ ಜಾಗೃತಿ ಮೂಡಿಸಿದ್ದಾರೆ.

'ಸ್ವಾತಂತ್ರ್ಯ' ಎಂಬುದು ಒಂದು ತತ್ವ ಮತ್ತು ಅನುಭವಜನ್ಯ ಸಂಗತಿ ಎಂದು ವೇದ್ಯವಾಗಿದೆ. ಅದು ಬದುಕಿನ ಸರ್ವ ನೆಲೆಗಳಲ್ಲೂ ಕಾಣಿಸಿಕೊಳ್ಳುವ, ಸರ್ವಾಂತರ್ಯಾಮಿಯಾಗುವ ಪ್ರಧಾನ ಪರಿಕಲ್ಪನೆ ಎಂದು ಭಾವಿಸಬಹುದಾಗಿದೆ.

ಇತಿಹಾಸ ಮತ್ತು ಸಾಹಿತ್ಯದ ಅಭ್ಯಾಸಕ್ಕೆ ಆಧುನಿಕ ತಂತ್ರಜ್ಞಾನ ಅಥವಾ ಕಂಪ್ಯೂಟರ್‌ನ್ನು ಉಪಯೋಗಿಸುವ ಕುರಿತು 1973ರಷ್ಟು ಹಿಂದೆಯೇ ಡಾ. ಶ್ರೀನಿವಾಸ್ ಹಾವನೂರ ಅವರು ಮುಂಬೈ ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಗ್ರಂಥಪಾಲಕರಾಗಿದ್ದಾಗ ವೈಜ್ಞಾನಿಕ ಮಾಹಿತಿಯ ಪ್ರತೀಕರಣ, ವಿಶ್ಲೇಷಣೆ ಪದ ಪ್ರಯೋಗ ಕೋಶಗಳ ತಯಾರಿಕೆ ಮುಂತಾದ ಎಲ್ಲಾ ಕೆಲಸಗಳಿಗೂ ಕಂಪ್ಯೂಟರ್ ಬಳಕೆಯಾಗುತ್ತಿದ್ದನ್ನು ಅವರು ಗಮನಿಸಿ, ಸಾಹಿತ್ಯ ಕ್ಷೇತ್ರದಲ್ಲಿ ಇದನ್ನು ಉಪಯೋಗಿಸಲು ಸಾಧ್ಯವೆಂಬುದನ್ನು ಮನಗಂಡರು. ಇದಕ್ಕೂ ಪೂರ್ವದಲ್ಲಿಯೇ 1959 ರಷ್ಟು ಹಿಂದೆಯೇ ಕಾರ್ನಲ್ ವಿಶ್ವವಿದ್ಯಾನಿಲಯವು ಕಂಪ್ಯೂಟರ್ ಅನ್ನು ಉಪಯೋಗಿಸಿಕೊಂಡು ತಯಾರಿಸಿರುವ ಎಮಿಲಿ ಡಿಕ್ಕಿನ್ಸನ್ ಎಂಬ ಇಂಗ್ಲಿಷ್ ಕವಯತ್ರಿಯ ಕವಿತೆಗಳ ಶಬ್ದ ಪ್ರಯೋಗ ಕೋಶವನ್ನು ಪ್ರಕಟಿಸಿದ ಉದಾಹರಣೆ ಅವರ ಕಣ್ಣುಮುಂದಿತ್ತು. ಇಂಗ್ಲಿಷ್‌ನಲ್ಲಿ ಸಾಧ್ಯವಾಗಬಹುದಾದ ಈ ಕಾರ್ಯ ಕನ್ನಡಕ್ಕೆ ಏಕೆ ಸಾಧ್ಯವಿಲ್ಲ ಎಂಬ ಆಶಾ ಭಾವನೆಯೊಂದಿಗೆ ಅವರು ಕಾರ್ಯಪ್ರವೃತ್ತರಾದರು. ಡಾ. ಹಾವನೂರವರು ಕಂಪ್ಯೂಟರನ್ನು ಉಪಯೋಗಿಸಿಕೊಂಡು ಸಮಗ್ರ ದಾಸಸಾಹಿತ್ಯದ ವಿಷಯಾನುಗುಣ ವಿಂಗಡಣೆ ಸುಮಾರು 140ಕ್ಕೂ ಹೆಚ್ಚು ಹರಿದಾಸರು ರಚಿಸಿದ 15 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ವಸ್ತು, ಸ್ಥಳ, ವಿಷಯ, ಅಂಕಿತ ಮುಂತಾದ 840ಕ್ಕೂ ಹೆಚ್ಚು ವಿಷಯಗಳ ಅಡಿಯಲ್ಲಿ ವಿಂಗಡಿಸಲು ಸಾಧ್ಯವಾಗುವ ಅಂತಹ ಕಂಪ್ಯೂಟರ್ ಕಾರ್ಯಕ್ರಮವನ್ನು ಅವರು ರೂಪಿಸಿದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಎಲ್ಲಾ ಕನ್ನಡ ಶಾಸನಗಳನ್ನು ಕಂಪ್ಯೂಟರಕ್ಕೆ ಅಳವಡಿಸಿದ್ದಾದರೆ, ಪರಿಪೂರ್ಣವಾದ ಐತಿಹಾಸಿಕ ದಾಖಲೆಗಳನ್ನು ಇತಿಹಾಸ ಸಂಶೋಧನಾರ್ಥಿಗಳು ಪಡೆದುಕೊಳ್ಳಲು ಅನುಕೂಲವಾಗುವುದರಲ್ಲಿ ಸಂದೇಹವೇ ಇಲ್ಲ.

**ಸಮಾರೋಪ**

ಒಟ್ಟಾರೆ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಪರಸ್ಪರ ಒಂದಕ್ಕೊಂದು ಪೂರಕವಾಗಿದ್ದು, ಇತಿಹಾಸವು ಆಯಾ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಬದಲಾವಣೆಗಳನ್ನು ದಾಖಲಿಸಿದರೆ, ಕನ್ನಡ ಸಾಹಿತ್ಯವು ಆ ಬದಲಾವಣೆಗಳಿಗೆ ಮಾನವೀಯ ಸ್ಪರ್ಶವನ್ನು ನೀಡುತ್ತಾ ಜನರ ಅನುಭವ, ಭಾವನೆ, ಮೌಲ್ಯಗಳು ಹಾಗೂ ಆಶಯಗಳನ್ನು ಜೀವಂತವಾಗಿ ಪ್ರತಿಬಿಂಬಿಸುತ್ತದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಕನ್ನಡ ಸಾಹಿತ್ಯವು ತನ್ನ ಸಂಸ್ಕೃತಿ ಮತ್ತು ಜನಜೀವನವನ್ನು ನಿಷ್ಠೆಯಿಂದ ದಾಖಲಿಸಿ ಸಾಮಾಜಿಕ ಚಲನಗಳಿಗೆ ಸಕ್ರಿಯವಾಗಿ ಸ್ಪಂದಿಸಿರುವುದು ಸ್ಪಷ್ಟವಾಗುತ್ತದೆ. ಹೀಗಾಗಿ ಇತಿಹಾಸವು ಸಾಹಿತ್ಯಕ್ಕೆ ಹಿನ್ನೆಲೆಯಾಗಿದ್ದು, ಸಾಹಿತ್ಯವು ಇತಿಹಾಸಕ್ಕೆ ಜೀವ ತುಂಬುವ ಶಕ್ತಿಯಾಗಿ

ಕಾರ್ಯನಿರ್ವಹಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಷ. ಶೆಟ್ಟರ್; ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಅಭಿನವ, ವಿಜಯನಗರ, ಬೆಂಗಳೂರು 2020
2. ಈರಣ್ಣ ಕೆ.ಪಿ.; ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಮನು ಸಾಹಿತ್ಯ ಪ್ರಕಾಶನ, ಧಾರವಾಡ 2000
3. ಹಾಗರಗಿ ಮಹಾದೇವಿ; ಕಲ್ಯಾಣ ಚಾಲುಕ್ಯರ ಕಾಲದ ಮಹಿಳೆಯರ ಸ್ಥಾನಮಾನ, ಓಂಕಾರ ಪ್ರಕಾಶನ, ಧಾರವಾಡ, 2011
4. ಕುಮಾರಸ್ವಾಮಿ ಕೆ ಎಸ್; ಬೃಹತ್ ಕರ್ನಾಟಕದ ಶಿಲ್ಪಾಚಾರ್ಯರ ಚರಿತೆ, ಕಣ್ವ ಪ್ರಕಾಶನ, ಬೆಂಗಳೂರು 2013
5. ಸರಸ್ವತಿ ಎನ್; ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಸಿಂಚು ಮಲ್ಟಿ ಗ್ರಾಫ್, ಮೈಸೂರು, 2008
6. ಚಿದಾನಂದಮೂರ್ತಿ ಎಂ,; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2002
7. ಸುರೇಂದ್ರರಾವ್ ಬಿ. (ಸಂ); ಕರ್ನಾಟಕ ಚರಿತ್ರೆ, ಸಂಪುಟ–2, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 1997
8. ಕೃಷ್ಣ ಕೋಲಾರ ಕುಲಕರ್ಣಿ; ವಿಜಾಪುರ ಆದಿಲ್ ಶಾಹಿ: ಸಖ್ಯಾಬ, ಆದಿಲ್ ಶಾಹಿ ಅಧ್ಯಯನ ಸಂಸ್ಥೆ, ವಿಜಯಪುರ, 2002
9. ಕಲ್ಯಾಣಿ ಸಂಗಪ್ಪ; ಬಾಗಲಕೋಟೆ ಜಿಲ್ಲೆಯ ದೇಸಗತಿಗಳು, ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006,
10. ಷಡಕ್ಷರಯ್ಯ ಆರ್.ಎಂ. & ಭರಮಗೌಡರ ವನಜಾಕ್ಷಿ; (ಸಂ) ಕಲಕೇರಿ ಸಂಸ್ಥಾನದ ದಾಖಲೆಗಳ ಸಾಂಸ್ಕೃತಿಕ ಅಧ್ಯಯನ,
11. ಶೇಕದಾರ ವಿಜಯಕುಮಾರ; ವಿಜಾಪುರ ಜಿಲ್ಲೆಯ ದೇಸಗತಿಗಳು, ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಧಾರವಾಡ
12. ಪಾಲ್ಕೀವಾಲ ಎನ್.ಎ. (ಅನು. ಬಿ.ಎಸ್. ರುಕ್ಕಮ್ಮ) ಭಾರತದ ಅಮೂಲ್ಯ ಪರಂಪರೆ, ಭಾರತೀಯ ವಿದ್ಯಾ ಭವನ, ಮೈಸೂರು, 2010



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.